
# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ


ಇತ್ತೀಚೆಗೆ ಛತ್ತೀಸ್‌ಗಢದಲ್ಲಿ ನಕ್ಸಲರ ದಾಳಿಗೆ ಬಲಿಯಾದ ಸಿಆರ್‌ಪಿಎಫ್ ಯೋಧರಿಗೆ ಸಮುದ್ರ ತಟದಲ್ಲಿ ಮರಳುಶಿಲ್ಪ ರಚಿಸುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದ ಒಡಿಶಾದ ಕಲಾವಿದ ಸುದರ್ಶನ್ ಪಟ್ನಾಯಕ್


ಸಂಪುಟ : 42 ಸಂಚಿಕೆ : 17 ಪ್ಲವ – ಚೈತ್ರ ಕಲಿಯುಗಾಬ್ದ 5123 15–04–2021 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ರಾಷ್ಟ್ರನಾಯಕ ಡಾ. ಭೀಮರಾವ್ ಅಂಬೇಡ್ಕರ್ – ನೆನಪು

**ಏಪ್ರಿಲ್ 14 – ಡಾ. ಬಿ ಆರ್ ಅಂಬೇಡ್ಕರ್ ಅವರ ಜನ್ಮದಿನ. ಆಧುನಿಕ ಭಾರತದ ನಿರ್ಮಾತೃಗಳಲ್ಲಿ ಮೊದಲ ಸಾಲಲ್ಲಿ ನಿಲ್ಲುವ ಹೆಸರು ಅವರದ್ದು. ಸ್ವತಂತ್ರ ಭಾರತಕ್ಕೆ ಆಧಾರಸ್ತಂಭವಾಗಿರುವ ನಮ್ಮ ಸಂವಿಧಾನವನ್ನು ನೀಡಿರುವುದು ಅವರ ಒಂದು ಮಹಾನ್ ಕಾರ್ಯವಾದರೆ, ಅಸ್ಪೃಶ್ಯತೆಯನ್ನು ಕೊನೆಗಾಣಿಸಲು ಅವರು ನಡೆಸಿದ ಹೋರಾಟ ಇನ್ನೊಂದು ಮಹಾನ್ ಕಾರ್ಯ. ಅದರ ಫಲವಾಗಿ ಶಿಕ್ಷಣ, ಉದ್ಯೋಗಗಳಲ್ಲಿ ಇಂದು ನಮ್ಮ ಸಮಾಜದ ದುರ್ಬಲವರ್ಗ ಕೂಡ ತನ್ನ ಪಾಲು ಪಡೆದುಕೊಳ್ಳುತ್ತಿದೆ.**

**ಬಾಬಾಸಾಹೇಬರೊಂದಿಗೆ ಒಡನಾಡಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿದ್ದ ದತ್ತೋಪಂಥ ಠೇಂಗಡಿಯವರು ಬರೆದ, ಇನ್ನೋರ್ವ ಪ್ರಚಾರಕ ಚಂದ್ರಶೇಖರ ಭಂಡಾರಿಯವರು ಕನ್ನಡಕ್ಕೆ ಅನುವಾದಿಸಿದ 'ಸಾಮಾಜಿಕ ಕ್ರಾಂತಿಸೂರ್ಯ ಡಾ. ಬಾಬಾಸಾಹೇಬ್ ಅಂಬೇಡ್ಕರ್' ಪುಸ್ತಕದಿಂದ ಆಯ್ದ ಕೆಲವು ಭಾಗಗಳನ್ನು ಇಲ್ಲಿ ಕೊಟ್ಟಿದೆ.**



ಅಂಬೇಡ್ಕರ್ ಅವರ ಸಂಪೂರ್ಣ ಜೀವನ ಕಾರ್ಯವೆಂದರೆ ಸಾಮಾಜಿಕ ಕ್ರಾಂತಿಯ ಅಗ್ರಪಂಕ್ತಿಯ ನಾಯಕತ್ವ ವಹಿಸುವುದು ಮಾತ್ರ ಎಂದು ಯಾರಾದರೂ ತಿಳಿದಲ್ಲಿ ಅದು ಸಹ ಅವರಿಗೆ ಅಪಚಾರವೆಸಗಿದಂತೆಯೇ ಸರಿ. ಅವರ ಬದುಕಿನ ಆಯಾಮಗಳು ಹಲವು. ಅದರಲ್ಲಿ ಸಾಮಾಜಿಕ ಆಂದೋಲನದ ಕಾರ್ಯ ಒಂದು ಮಾತ್ರ. ನಿಜ, ಅದು ಅತ್ಯಂತ ಮಹತ್ತ್ವದ್ದಾಗಿತ್ತು ಎಂಬುದರಲ್ಲಿ ಎರಡು ಅಭಿಪ್ರಾಯವಿಲ್ಲ ಆದರೆ ಅವರ ಇನ್ನಿತರ ಕಾರ್ಯಗಳ ಮಹತ್ವವು ಕಡಿಮೆಯೇನಲ್ಲ.

ಅವರ ವ್ಯಕ್ತಿತ್ವದ ಎಲ್ಲ ಆಯಾಮಗಳನ್ನು ಒಟ್ಟಾಗಿ ಕಲ್ಪಿಸುವುದು ಕಠಿಣವೇ. ಅವರು ಶ್ರೇಷ್ಠ ಸಂವಿಧಾನ ತಜ್ಞರಾಗಿದ್ದರು ಎಂಬುದನ್ನು ಅವರ ಟೀಕಾಕಾರರು ಈಗ ಒಪ್ಪಿಕೊಳ್ಳಲು ಆರಂಭಿಸಿದ್ದಾರೆ. ಅವರು ಕಾರ್ಮಿಕ ಸಚಿವರಾಗಿದ್ದಾಗ ಅವರ ಆಡಳಿತ ಕೌಶಲ್ಯ ಬೆಳಕಿಗೆ ಬಂತು. ನೆಹರು ಅವರ ಸಚಿವ ಸಂಪುಟಕ್ಕೆ ಅವರು ರಾಜೀನಾಮೆಯಿತ್ತಾಗ ಟೈಮ್ಸ್ ಆಫ್ ಇಂಡಿಯಾದಂತಹ ಪತ್ರಿಕೆ ತನ್ನ ಸಂಪಾದಕೀಯದಲ್ಲಿ, "ಅಂಬೇಡ್ಕರರಿಗೆ ಮನುವಿನ ಕಿರೀಟ ಸಿಗದೇ ಇರಬಹುದು. ಆದರೂ ಸಚಿವ ಸಂಪುಟದಲ್ಲಿ ಪ್ರಭಾವಿಯಾಗಿ ಕಾರ್ಯವೆಸಗಿ ಅವರೀಗ ಹೊರಗೆ ನಡೆದಿದ್ದಾರೆ. ಈ ಮಂತ್ರಿಮಂಡಲದಲ್ಲಿ ಬುದ್ಧಿವಂತರೆನ್ನಬಹುದಾದವರು ಇದ್ದವರೇ ಕಡಿಮೆ. ಈಗಂತೂ ಅಂಬೇಡ್ಕರರಂತಹ ವಿದ್ವಾಂಸರು ಮತ್ತು ಸಾರ್ವಜನಿಕ ಕಾರ್ಯದ ಆಳವಾದ ಅಧ್ಯಯನ ಮಾಡಿದವರು ದೂರವಾಗಿದ್ದರಿಂದ ಮಂತ್ರಿಮಂಡಲದ ಹೊಳಪು ಇನ್ನಷ್ಟು ಕ್ಷೀಣಿಸಿತು. ನಿಜ, ಸಾರ್ವಜನಿಕರು ರಾಜಕೀಯ ವಿಚಾರಗಳನ್ನು ಬಹುಬೇಗನೆ ಮರೆಯುತ್ತಾರೆ. ಆದರೆ ಪೂರ್ವಾಗ್ರಹವನ್ನು ಬಿಟ್ಟು ಹೊಸ ಹೊಣೆಯನ್ನು ಸ್ವೀಕರಿಸುವ ಹಾಗೂ ಪ್ರಸಂಗೋಚಿತವಾಗಿ ವ್ಯವಹರಿಸುವ ತಮ್ಮ ಸಾಮರ್ಥ್ಯವನ್ನು ಅಂಬೇಡ್ಕರರು ಚೆನ್ನಾಗಿ ತೋರಿಸಿದ್ದಾರೆ. ಇಂತಹ ಕರ್ತೃತ್ವಶಾಲಿ ವ್ಯಕ್ತಿಯೋರ್ವರ ಸೇವೆಯಿಂದ ವಂಚಿತರಾಗುವುದು ಭಾರತಕ್ಕೆ ಹಿತಕಾರಿಯಾಗಲಾರದು" ಎಂದು ಬರೆದಿತ್ತು.

ಅವರ ಬದುಕಿನ ಎಲ್ಲ ಪ್ರಸಂಗಗಳಲ್ಲೂ ಲೋಕಸಂಗ್ರಹದ ಅವರ ಕೌಶಲ್ಯ ಚೆನ್ನಾಗಿ ಕಾಣಿಸುತ್ತಿತ್ತು. ಅವರು ಸ್ಥಾಪಿಸಿದ ಶೈಕ್ಷಣಿಕ ಸಂಸ್ಥೆಗಳ ರಚನಾ ವಿಧಾನವನ್ನು ಇನ್ನಿತರರು ಸಹ ಆದರ್ಶವಾಗಿ ಸ್ವೀಕರಿಸಿದರು. ಸಂವೇದನಶೀಲತೆ, ಉದಾತ್ತ ಕೃತಜ್ಞತೆ, ಅಸಾಮಾನ್ಯ ಸಂಯಮ ಮತ್ತು ಸಂತುಲಿತ ರೀತಿ–ನೀತಿ, ಜ್ಞಾನ ಸಂಪಾದನೆಯ ತಹತಹ ಇವೆಲ್ಲವೂ ಅಪರೂಪವೆನ್ನಬಹುದಾದ ಸಂಗತಿಗಳು.

ಕೇವಲ ಅಸ್ಪೃಶ್ಯರ ವಿಷಯದಲ್ಲಷ್ಟೇ ಅಲ್ಲ, ಎಲ್ಲ ಅಸ್ಪೃಶ್ಯೇತರ ಶೋಷಿತರ ಬಗ್ಗೆಯೂ ಅವರ ಅಂತಃಕರಣ ಮಿಡಿಯುತ್ತಿತ್ತು. ಕಾರ್ಮಿಕರು, ರೈತರು, ವನವಾಸಿಗಳು ಸಹ ಅವರ ಅನುಕಂಪದ ವ್ಯಾಪ್ತಿಯಲ್ಲಿದ್ದವರೇ.

## ಇಸ್ಲಾಮಿನ ಬಗ್ಗೆ ಡಾ. ಅಂಬೇಡ್ಕರ್ ಅವರ ಚಿಂತನೆ

"ಇಸ್ಲಾಮಿನ ಸೋದರತೆಯನ್ನುವುದು ವಿಶ್ವಕ್ಕೆಲ್ಲ ಒಂದೇ ಎಂದಲ್ಲ. ಅದು ಮುಸಲ್ಮಾನರಿಗೆ ಮಾತ್ರ ಸೀಮಿತವಾಗಿರುವ, ಮುಸಲ್ಮಾನರ ನಡುವೆ ಮಾತ್ರ ಇರುವಂತಹ ಬಾಂಧವ್ಯ. ಮುಸಲ್ಮಾನರಲ್ಲದವರ ಪಾಲಿಗೆ ತಿರಸ್ಕಾರ ಹಾಗೂ ವೈರ ಬಿಟ್ಟು ಬೇರೇನೂ ಅವರು ತಿಳಿಯರು. ನಿಜವಾದ ಮುಸಲ್ಮಾನ ಎನಿಸಿಕೊಂಡವನಿಗೆ ಭಾರತವನ್ನು ತನ್ನ ತಾಯ್ನಾಡಾಗಿ ತಿಳಿಯಲು ಹಾಗೂ ಹಿಂದುಗಳನ್ನು ತನ್ನ ಬಂಧು–ಬಳಗದಂತೆ ಕಾಣಲು ಇಸ್ಲಾಮಿನಲ್ಲಿ ಅವಕಾಶವೇ ಇಲ್ಲ." ಎಂದು ಅಂಬೇಡ್ಕರ್ ಅಭಿಪ್ರಾಯಪಟ್ಟಿದ್ದಾರೆ.

1940ರಲ್ಲಿ ಪ್ರಕಟವಾದ ತಮ್ಮ 'ಥಾಟ್ಸ್ ಆನ್ ಪಾಕಿಸ್ತಾನ್' ಗ್ರಂಥದಲ್ಲಿ ಬಾಬಾಸಾಹೇಬರು ಹೇಳಿರುವುದು ಹೀಗಿದೆ, "ಅವರು ಭಾರತದಲ್ಲಿ ಇರುತ್ತಾರೆ. ಆದರೆ ಇಸ್ಲಾಮೀ ಚಿಂತನೆಗನುಗುಣವಾಗಿ ಅವರ ದೃಷ್ಟಿ ತುರ್ಕಿಸ್ಥಾನ ಅಥವಾ ಅಫ್ಘಾನಿಸ್ತಾನದ ಕಡೆ ಇರುತ್ತದೆ. ಭಾರತ ತಮ್ಮದು ಎಂಬ ಅಭಿಮಾನವೇ ಅವರಿಗಿರುವುದಿಲ್ಲ ಮತ್ತು ಇಲ್ಲಿನವರಾದ ತಮ್ಮ ಸಮೀಪದ ಹಿಂದೂ ಬಂಧುಗಳ ಜೊತೆ ಅವರಿಗೆ ಲೇಶ ಮಾತ್ರವೂ ಆತ್ಮೀಯತೆ ಇರುವುದಿಲ್ಲ. ಇಂತಹ ಮುಸಲ್ಮಾನರು ಬೇರೊಂದು ಮುಸಲ್ಮಾನ ದೇಶದಿಂದ ಆಕ್ರಮಣವಾದಾಗ ಭಾರತವನ್ನು ರಕ್ಷಿಸಬಹುದು ಎಂದು ನಂಬುವುದು ಅಪಾಯವೇ. ಇದು ನನ್ನ ಅನಿಸಿಕೆ."

ಪಾಕಿಸ್ತಾನ ಪ್ರತ್ಯೇಕವಾದ ನಂತರ ಅಲ್ಲಿದ್ದ ದಲಿತ ಬಾಂಧವರನ್ನು ಉದ್ದೇಶಿಸಿ ಅವರು ಹೇಳಿದರು, "ಪಾಕಿಸ್ತಾನದಲ್ಲಿ ಸಿಕ್ಕಿ ಬಿದ್ದು ಒದ್ದಾಡುತ್ತಿರುವ ಎಲ್ಲಾ ಅಸ್ಪೃಶ್ಯ ಬಾಂಧವರು ಯಾವುದೇ ವಿಧದಿಂದಲಾದರೂ ಗಡಿ ದಾಟಿ ಭಾರತವನ್ನು ತಲುಪಬೇಕು. ಅದೇ ರೀತಿಯಲ್ಲಿ ಪಾಕಿಸ್ತಾನದಲ್ಲಿ ಮತ್ತು ಹೈದರಾಬಾದ್ ಸಂಸ್ಥಾನದಲ್ಲಿರುವ ನಮ್ಮ ಎಲ್ಲ ಬಂಧುಗಳು ಅಲ್ಲಿನ ಮುಸಲ್ಮಾನರನ್ನು ಹಾಗೂ ಮುಸ್ಲಿಂ ಲೀಗನ್ನು ನೆಚ್ಚಿಕೊಂಡಿರುವುದು ಆತ್ಮಘಾತಕವಾದೀತು. ದಲಿತ ಬಂಧುಗಳ ಮನದಲ್ಲಿ ಮನೆಮಾಡಿರುವ ತಪ್ಪೆಂದರೆ ಹಿಂದೂಗಳು ನಮ್ಮನ್ನು ತಿರಸ್ಕರಿಸುತ್ತಿದ್ದಾರೆ ಎಂಬ ಒಂದೇ ಕಾರಣದಿಂದ ಮುಸಲ್ಮಾನರು ತಮ್ಮ ಮಿತ್ರರಾಗಿದ್ದಾರೆಂಬ ಅನೇಕರ ನಂಬಿಕೆ. ಇದು ಕೇವಲ ಭ್ರಮೆ.

ಪಾಕಿಸ್ತಾನದಲ್ಲಿ ಹಾಗೂ ಹೈದರಾಬಾದಿನಲ್ಲಿ ಈಗಲೂ ಇರುವಂತಹ ಅಸ್ಪೃಶ್ಯರು ಹೇಗೋ ಬಚಾಯಿಸಿಕೊಳ್ಳಬೇಕೆಂಬ ಅಪೇಕ್ಷೆಯಿಂದ ಮತಾಂತರಗೊಳ್ಳಲು ಒಪ್ಪಬಾರದು. ಈಗಾಗಲೇ ಬಲತ್ಕಾರದಿಂದ ಮುಸಲ್ಮಾನರಾಗಿ ಮತಾಂತರಗೊಂಡವರಿಗೆ ಪುನಃ ತಮ್ಮ ಮಾತೃಧರ್ಮಕ್ಕೆ ಕರೆತಂದು ಮೊದಲಿನಂತೆ ತಮ್ಮ ಬಂಧುಗಳ ಜೊತೆ ಅಷ್ಟೇ ಪ್ರೀತಿ ಗೌರವಗಳಿಂದ ಬದುಕಲು ವ್ಯವಸ್ಥೆ ಮಾಡುವ ಆಶ್ವಾಸನೆಯನ್ನು ನಾನು ನೀಡುತ್ತಿದ್ದೇನೆ. ಹಿಂದುಗಳಿಂದ ಅದೆಷ್ಟೇ ತುಳಿತ ದಬ್ಬಾಳಿಕೆಗಳು ನಡೆದಿರಬಹುದಾದರೂ ನಾವು ಮನಸ್ಸನ್ನು ಕಲುಷಿತಗೊಳಿಸಿಕೊಳ್ಳಬಾರದು. ಹೈದರಾಬಾದ್ ಸಂಸ್ಥಾನದಲ್ಲಿರುವ ನಮ್ಮ ಎಲ್ಲ ಬಂಧುಗಳಿಗೆ ಇನ್ನೊಂದು ಎಚ್ಚರಿಕೆ. ಭಾರತದ ವೈರಿಯಾಗಿರುವ ನಿಜಾಮನೊಂದಿಗೆ ಯಾವುದೇ ಕಾರಣಕ್ಕೆ ಕೈಜೋಡಿಸಿ ನಮ್ಮ ಜನಾಂಗಕ್ಕೆ ಕಳಂಕ ತರಬೇಡಿ."


## ಮಾನವನ ಏಳಿಗೆಗೆ ಧರ್ಮವು ಅತ್ಯಗತ್ಯ

ಇನ್ನೊಂದೆಡೆ ಅವರು ಕಮ್ಯುನಿಸಂ ಬಗ್ಗೆ ಹೇಳಿದ್ದು ಹೀಗಿದೆ, "ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತವನ್ನು ಆಧರಿಸಿ ಒಂದು ಪಂಥ ಹುಟ್ಟಿಕೊಂಡಿರುವುದು ನನಗೆ ತಿಳಿದಿದೆ. ಅವರಿಗೆ ಧರ್ಮ ಮಹತ್ತ್ವದ್ದಲ್ಲ. ಅವರ ದೃಷ್ಟಿಯಲ್ಲಿ ಧರ್ಮದಲ್ಲಿ ಏನೂ ಇಲ್ಲ. ಅವರ ಸಿದ್ಧಾಂತವೆಂದರೆ ಪ್ರಾತಃಕಾಲದ ಅಲ್ಪಾಹಾರ ದಲ್ಲಿ ಬ್ರೆಡ್, ಕೆನೆ ಹಾಲು, ಕೋಳಿ ಕಾಲು ಅಷ್ಟು ಸಿಕ್ಕರೆ ಸಾಕು. ಹೊಟ್ಟೆ ತುಂಬಾ ಊಟ ಲಭಿಸಿ, ಸಾಕಷ್ಟು ನಿದ್ರೆ ಸಿಕ್ಕರೆ ಧಾರಾಳವಾಯಿತು. ಅವರ ಈ ವಿಚಾರ ನನಗೆ ಒಪ್ಪಿಗೆಯಿಲ್ಲ. ನನ್ನ ತಂದೆ ಬಡವರಿದ್ದರು. ಹೀಗಾಗಿ ನನಗೆ ಅಂತಹ ಸುಖ ಸಿಗಲಿಲ್ಲ. ನನ್ನಷ್ಟು ಕಷ್ಟದ ಜೀವನ ಇನ್ನಾರೂ ಬದುಕಿರಲಾರರು. ಅದಕ್ಕಾಗಿ ನನಗದು ಅನುಭವದಿಂದ ತಿಳಿದಿದೆ. ಆರ್ಥಿಕ ಏಳಿಗೆಗಾಗಿ ಆಂದೋಲನದ ಅಗತ್ಯವಿದೆ ಎಂದು ನಾನು ಒಪ್ಪುತ್ತೇನೆ. ನಾನದಕ್ಕೆ ವಿರೋಧಿಯಲ್ಲ. ಮಾನವನ ಆರ್ಥಿಕ ಉನ್ನತಿ ಆಗಲೇಬೇಕು.

ಈ ವಿಷಯದಲ್ಲಿ ಒಂದು ಅತಿಮಹತ್ತ್ವದ ವ್ಯತ್ಯಾಸವನ್ನು ನಾನು ಒಪ್ಪುತ್ತೇನೆ. ಕೋಣ, ಎತ್ತು ಮತ್ತು ಮನುಷ್ಯನ ನಡುವೆ ವ್ಯತ್ಯಾಸವಿದೆ. ಕೋಣ ಮತ್ತು ಎತ್ತುಗಳಿಗೆ ನಿತ್ಯ ಮೇವು ಬೇಕಾಗುತ್ತದೆ. ಮಾನವನಿಗೆ ಅನ್ನ ಬೇಕು. ಇವೆರಡು ವರ್ಗದಲ್ಲಿರುವ ವ್ಯತ್ಯಾಸವಿಷ್ಟೇ; ಕೋಣ, ಎತ್ತುಗಳಿಗೆ ಮನಸ್ಸು ಎಂಬುದಿಲ್ಲ. ಆದರೆ ಮಾನವನಿಗೆ ಶರೀರದೊಂದಿಗೆ ಮನಸ್ಸೂ ಇದೆ. ಅದಕ್ಕಾಗಿ ಮನುಷ್ಯನಿಗೆ ಶರೀರದ ಮತ್ತು ಮನಸ್ಸಿನ ಕುರಿತು ಸಹ ಯೋಚಿಸಬೇಕಾಗುತ್ತದೆ. ಮನಸ್ಸಿನ ವಿಕಾಸವಾಗುವುದು ಎಂದರೆ ಅದು ಸುಸಂಸ್ಕೃತಗೊಳ್ಳುವುದು. ಯಾವ ದೇಶದ ಜನರು ತಮಗೆ ಅನ್ನ ಬಿಟ್ಟು ಇನ್ನಾವುದೂ ಮುಖ್ಯವಲ್ಲ, ಮನಸ್ಸು ಸುಸಂಸ್ಕೃತವಾಗುವುದರಲ್ಲಿ ತನಗೆ ಸಂಬಂಧವಿಲ್ಲ ಎನ್ನುತ್ತಾರೋ ಆ ದೇಶದೊಂದಿಗೆ, ಅಲ್ಲಿನ ಜನರೊಂದಿಗೆ ಸಂಬಂಧದಿಂದ ನನಗೂ ಏನೂ ಉಪಯೋಗವಿಲ್ಲ. ಯಾವ ರೀತಿಯಲ್ಲಿ ಮಾನವನಿಗೆ ನಿರೋಗಿ ಸದೃಢ ಶರೀರ ಬೇಕೋ, ಅದೇ ರೀತಿಯಲ್ಲಿ ಸುಸಂಸ್ಕೃತ ಮನಸ್ಸೂ ಬೇಕು. ಅದಿಲ್ಲದೇ ಮಾನವನ ಉನ್ನತಿಯಾಗಿದೆ ಎನ್ನುವುದು ಒಪ್ಪತಕ್ಕ ಸಂಗತಿಯಲ್ಲ."

## ಸಂಸ್ಮರಣೆ | ಸತ್ಯಕಾಮ (02.03.1920 – 20.10.1998)

1920ರ ಮಾರ್ಚ್ 2ರಂದು ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಗಲಗಲಿ ಗ್ರಾಮದಲ್ಲಿ ಜನಿಸಿದ ಅನಂತ ಕೃಷ್ಣಾಚಾರ್ಯ ಶಹಾಪುರ ಅವರು ತಮ್ಮ ಕಾವ್ಯನಾಮವನ್ನು 'ಸತ್ಯಕಾಮ' ಎಂದಿರಿಸಿಕೊಂಡರು. 1934ರವರೆಗೆ ಇವರ ಶಿಕ್ಷಣ ಗಲಗಲಿಯಲ್ಲಿಯೇ ನಡೆಯಿತು. ಮುಲ್ಕಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಳಿಕ ಒಂದು ವರ್ಷ ಗಲಗಲಿಯಲ್ಲಿ ಸುಮ್ಮನೆ ಕಳೆದರು. 1935ರಲ್ಲಿ ಬಾಗಲಕೋಟೆಯ ಸಕ್ರಿ ಹೈಸ್ಕೂಲಿನಲ್ಲಿ ಮುಂದಿನ ಶಿಕ್ಷಣಕ್ಕೆ ಸೇರಿಕೊಂಡರಾದರೂ ಓದು ಮುಂದುವರಿಸದೆ ಅಲ್ಲಿಗೇ ನಿಲ್ಲಿಸಿಬಿಟ್ಟರು.



1930–31ರಲ್ಲಿ ಭಾರತದಲ್ಲೆಲ್ಲಾ ಉಪ್ಪಿನ ಸತ್ಯಾಗ್ರಹ ಪ್ರಖರವಾಗಿ ನಡೆದಿತ್ತು. ಬಾಲಕ ಅನಂತ ಐದನೆಯ ತರಗತಿಯಲ್ಲಿ ಕಲಿಯುತ್ತಿದ್ದ. ತನ್ನ ಶಾಲೆಯ 20–25 ವಿದ್ಯಾರ್ಥಿಗಳನ್ನು ಕೂಡಿಸಿ ಮೆರವಣಿಗೆ ನಡೆಸಿದ. ಪೊಲೀಸರು ಬಂಧಿಸಿದರು. ಕ್ಷಮೆ ಕೇಳಲು ಸಿದ್ಧನಿಲ್ಲದ ಹುಡುಗನಿಗೆ 5 ಘಟಕಿಯ ಶಿಕ್ಷೆ ಆಯಿತು.

ಸತ್ಯಕಾಮ ಅವರು 1940ರಲ್ಲಿ 'ಜೀವನ ನಾಟ್ಯ ವಿಲಾಸಿ ಸಂಘ'ವನ್ನು ಸ್ಥಾಪಿಸಿ ಎನ್ಕೆ, ಬೇಂದ್ರೆ, ಶ್ರೀರಂಗ ಮೊದಲಾದವರ ನಾಟಕಗಳನ್ನು ಆಡಿದರು. 1943ರಲ್ಲಿ ಧಾರವಾಡದ ಸ್ವಾತಂತ್ರ್ಯ ಹೋರಾಟಗಾರ ಬುರ್ಲಿ ಬಿಂದುಮಾಧವರ ಜೊತೆಗೆ 6 ತಿಂಗಳು ಕಳೆದು ಬಂದ ಸತ್ಯಕಾಮ ಅವರು ಬೀಳಗಿ, ಗಲಗಲಿ, ಬೇವೂರು, ಕಡ್ಲಿಮಟ್ಟಿ, ಬಬಲೇಶ್ವರ, ವಿಜಾಪುರ ಇಲ್ಲೆಲ್ಲಾ ಬ್ರಿಟಿಷರ ವಿರುದ್ಧ ಭೂಗತ ಚಟುವಟಿಕೆಗಳನ್ನು ನಡೆಸಿದರು. ಇವರ ನಾಟ್ಯ ವಿಲಾಸಿ ಸಂಘದ ಹಲವಾರು ಗೆಳೆಯರು ಕೂಡಾ ಸ್ವಾತಂತ್ರ್ಯ ಹೋರಾಟದಲ್ಲಿ ಇವರಿಗೆ ಜೊತೆಯಾಗಿದ್ದರು. ಬ್ರಿಟಿಷ್ ಸರ್ಕಾರ ಇವರನ್ನು ಹಿಡಿದುಕೊಟ್ಟವರಿಗೆ ಹತ್ತು ಸಾವಿರ ರೂಪಾಯಿಗಳ ಬಹುಮಾನ ಪ್ರಕಟಿಸಿತ್ತು. ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಾ ಅಲೆಯುತ್ತಿದ್ದ ಇವರು ಆದಮಾರು ಮಠದ ಸ್ವಾಮಿಯವರಲ್ಲಿ ಸುಳ್ಳು ಹೆಸರಿನಲ್ಲಿ ಆಶ್ರಯ ಪಡೆದು 6 ತಿಂಗಳುಗಳ ಕಾಲ ಸಂಸ್ಕೃತಾಧ್ಯಯನ ಮಾಡಿದರು. ಮುಂದೆ ತಮ್ಮಲ್ಲಿನ ಆತ್ಮಶಕ್ತಿ ಬೆಳೆಸಿಕೊಳ್ಳಬೇಕೆಂಬ ಆಸಕ್ತಿ ಹುಟ್ಟಿ ಅದಕ್ಕಾಗಿ ಎಲ್ಲೆಡೆ ಅಲೆದಾಡಿದರು. ನಾಡಲ್ಲಿ ಸಿಗದಿದ್ದಾಗ ಕಾಡಿಗೆ ಹೋದರು. ಹಿಮಾಲಯಕ್ಕೆ ಹೋದರು. 1944ರಿಂದ 1956ರವರೆಗೆ ಕೇರಳದಿಂದ ಟಿಬೇಟ್‌ವರೆಗೆ ಎಲ್ಲೆಲ್ಲೂ ಅಲೆದಾಡಿದರು. ಈ ಸಮಯದಲ್ಲಿ ಅಧ್ಯಾತ್ಮ ಲಾಭದ ಜೊತೆಗೆ ಅವರಿಗೆ ತಾಂತ್ರಿಕರ ಪರಿಚಯವೂ ಆಯಿತು. ಪರಿಣಾಮವಾಗಿ ಸತ್ಯಕಾಮರು ತಾಂತ್ರಿಕ ವಿದ್ಯೆಯನ್ನು ಸಿದ್ಧಿಸಿಕೊಂಡರು. ಇದರ ವಿವರಗಳು 'ಪಂಚ'ಮ'ಗಳ ನಡುವೆ' ಮತ್ತು 'ತಂತ್ರಯೋನಿ' ಮುಂತಾದ ಅವರ ಕೃತಿಗಳಲ್ಲಿ ದೊರೆಯುತ್ತವೆ.

ಶ್ರೀ ಹಾಗೂ ಕಲ್ಯಾಣ ಸತ್ಯಕಾಮರ ಸ್ವಂತ ಪತ್ರಿಕೆಗಳು. ಕಲ್ಕಿ, ಸಾಧನಾ, ಸಂಕ್ರಾಂತಿ, ಪಂಚಾಮೃತ, ಸಂಯುಕ್ತ ಕರ್ನಾಟಕದಲ್ಲೂ ಅವರು ಕೆಲ ಕಾಲ ದುಡಿದಿದ್ದರು. ಸತ್ಯಕಾಮರು 50ಕ್ಕೂ ಹೆಚ್ಚು ಗ್ರಂಥಗಳನ್ನು ಬರೆದಿದ್ದಾರೆ. ಒಂದೆರಡು ಕೃತಿಗಳನ್ನು ಹೊರತುಪಡಿಸಿದಂತೆ ಉಳಿದೆಲ್ಲವುಗಳಿಗೂ ಅವರು ಪುರಾಣವಸ್ತುಗಳನ್ನೇ ಆಯ್ದುಕೊಂಡಿರುವುದು ವಿಶೇಷ.

ವೀಣೆ, ಮಾತೃಮಂದಿರ, ಮಾತೃಲಹರಿ, ಗಂಗಾಲಹರಿ ನಾಲ್ಕು ಸತ್ಯಕಾಮರ ಕವನ ಸಂಕಲನಗಳು. ಬಾಳಸೊಡರು, ಕರ್ಮವೇದನೆ, ಅನಂತ ಜೀವನ, ಉತ್ತರಾಯಣ, ಬತ್ತಿದ ಕಡಲು, ಆಹುತಿ, ಅಭಿನವ, ಅಶ್ವಘೋಷ, ಋಷಿಪಂಚಮಿ, ರಾಜಬಲಿ, ತಣ್ಣಗಿನ ಬೆಂಕಿ, ಶೃಂಗಾರತೀರ್ಥ, ಸೀತಾಪರಿತ್ಯಾಗ, ಬೆಂಕಿಯ ಮಗಳು, ನಾಗರನಂಜು, ಲಾವಣ್ಯ, ನಿ–ಪ್ರಯೋಗ, ತಂದೆ–ಮಗಳು, ದೇವನ ಇನ್ನೊಂದು ಬಾಗಿಲು, ಪುರುಷಸೂಕ್ತ, ನಾಯಿಮೂಗು, ರಾಜಕ್ರೀಡೆ, ಚಂಡ ಪ್ರಚಂಡ, ಒಡೆದ ಕನ್ನಡಿ, ಮನ್ವಂತರ, ಹಳೆಯ ರಾಜಕೀಯ, ಕೃಷ್ಣಾರ್ಪಣ, ಮನ್ವಂತರ, ವಿಚಿತ್ರವೀರ್ಯ, ತಂತ್ರಯೋನಿ, ಪಂಚ'ಮ'ಗಳ ನಡುವೆ, 'ಮಾತೃ ಲಹರಿ ಮತ್ತು ಇತರ ಕವಿತೆಗಳ ನಡುವೆ', ಅರ್ಧನಾರಿ, ಲಾವಣ್ಯ ಇವು ಇವರ ಕೆಲವು ಕೃತಿಗಳು. ಸಾಹಿತ್ಯ ಅಕಾಡೆಮಿ ಗೌರವವೂ ಒಳಗೊಂಡಂತೆ ಹಲವಾರು ಗೌರವಗಳು ಅವರಿಗೆ ಸಂದವು.

"ಮನಸ್ಸು ಪ್ರಜಾಪ್ರಭುತ್ವಕ್ಕೆ ಅರ್ಹರಲ್ಲದ ಪ್ರಜೆಯಂತೆ. ಹಕ್ಕು ಬೇಕು ಹೊಣೆಗಾರಿಕೆ ಬೇಡ. ಎಲ್ಲವನ್ನೂ ಸರ್ಕಾರ ಮಾಡಬೇಕು. ಸರ್ಕಾರದ ಈ ಕೆಲಸ ಮಾಡುವುದರಿಂದ ನಮಗೇನು" ಅನ್ನುವ ಪ್ರಜೆಯನ್ನೇ ಮನಸ್ಸು ಪ್ರತಿನಿಧಿಸುತ್ತದೆ. ತನ್ನ ಲಾಭದಿಂದ ದೇಶಕ್ಕೆ ಹಾನಿಯಾಗುತ್ತಿದ್ದರೂ ಅದು ದೊರೆಯದಿದ್ದರೆ ಆಂದೋಲನ. ಕರ್ಫ್ಯೂ ಜಾರಿ ಮಾಡಿದಾಗ ಬಾಲ ಮಡಿಸಿಕೊಂಡು ಮನೆ ಸೇರುವುದು." ಹೀಗೆ ಸತ್ಯಕಾಮರು ಮನುಷ್ಯನ ಮನಸ್ಸು ಮತ್ತು ದೇಹದ ಮೇಲೆ, 'ತಂತ್ರ' ಎಂಬ ವಿಜ್ಞಾನದ ಮೂಲಕ ಪ್ರಯೋಗಗಳನ್ನು ನಡೆಸಿ ಮಾನವ ಚೈತನ್ಯದ ವಿಕಾಸವನ್ನು ತಮ್ಮ ಕೃತಿಗಳಲ್ಲಿ ಪ್ರಕಟಪಡಿಸಿದರು.

ತಮ್ಮ ಬರವಣಿಗೆಯ ಪರಿಧಿಯಾಚೆಗೆ 1956ರಲ್ಲಿ ಜಮಖಂಡಿಯ ಹತ್ತಿರದ ಕಲ್ಲಹಳ್ಳಿ ಎಂಬ ಹಳ್ಳಿಯಲ್ಲಿ ರಾಜ್ಯ ಸರಕಾರದಿಂದ ಸ್ವಲ್ಪ ಭೂಮಿಯನ್ನು ಪಡೆದು ಸತ್ಯಕಾಮರು ಬೇಸಾಯ ಮಾಡುವುದನ್ನು ಇತರರಿಗೆ ಮಾದರಿಯಾಗುವಂತೆ ಮಾಡಿ ತೋರಿಸಿದರು. ಕಲ್ಲಹಳ್ಳಿಯ ಗುಡ್ಡಗಾಡನ್ನು ನಂದನವನವನ್ನಾಗಿ ಪರಿವರ್ತಿಸಿದ ಕೃಷಿ ಅನುಭವಿಯೂ ಹೌದು.

ಸ್ವಾತಂತ್ರ್ಯಯೋಧರಾಗಿ, ಲೇಖಕ, ಕೃಷಿಕರ್ಮಿಗಳಾಗಿ, ಕಾದಂಬರಿಕಾರರಾಗಿ, ಚಿಂತಕ, ಆಧ್ಯಾತ್ಮದ ಸಾಧಕರಾಗಿ ಪ್ರತಿಯೊಂದರಲ್ಲೂ ಅಳಿಸದ ಛಾಪು ಬಿಟ್ಟ ಈ ಮಹಾನ್ ಸಾಧಕ ಸತ್ಯಕಾಮ ಅವರು 1998ರ ಅಕ್ಟೋಬರ್ 20ರಂದು ನಿಧನರಾದರು.



### ಜಮ್ಮು-ಕಾಶ್ಮೀರದ ಸರ್ಕಾರಿ ಕಚೇರಿಗಳಲ್ಲಿ ತಿರಂಗಾ ಹಾರಿಸುವುದು ಕಡ್ಡಾಯ

ಸ್ವಾತಂತ್ರ್ಯದ ನಂತರ ಮೊದಲ ಬಾರಿಗೆ, ಜಮ್ಮು ಮತ್ತು ಕಾಶ್ಮೀರದ ಎಲ್ಲಾ ಸರ್ಕಾರಿ ಕಚೇರಿಗಳು ಮತ್ತು ಕಟ್ಟಡಗಳಲ್ಲಿ ತ್ರಿವರ್ಣ ಧ್ವಜ ಹಾರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಮಾರ್ಚ್ 26 ರಂದು ಈ ಕುರಿತು ಆದೇಶ ಹೊರಡಿಸಲಾಗಿದೆ. ಈ ಬಗ್ಗೆ ಹೊರಡಿಸಲಾದ ಸುತ್ತೋಲೆಯಲ್ಲಿ 'ಎಲ್ಲಾ ಜಿಲ್ಲೆ / ವಲಯದ ಮುಖ್ಯಸ್ಥರು / ತಹಶೀಲ್ / ಬ್ಲಾಕ್ ಮಟ್ಟದ ಅಧಿಕಾರಿಗಳು 15 ದಿನಗಳೊಳಗೆ ಜಿಲ್ಲೆಯ ಎಲ್ಲ ಸರ್ಕಾರಿ ಕಚೇರಿಗಳು / ಕಟ್ಟಡಗಳ ಮೇಲೆ ರಾಷ್ಟ್ರೀಯ ಧ್ವಜವನ್ನು ಹಾರಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಬೇಕು' ಎಂದು ಸೂಚಿಸಿದೆ.

ಕೇಂದ್ರ ಸರ್ಕಾರವು ಆಗಸ್ಟ್ 5, 2019 ರಂದು 370 ನೇ ವಿಧಿಯನ್ನು ರದ್ದುಗೊಳಿಸಿದ ಬಳಿಕ ಜಮ್ಮು ಕಾಶ್ಮೀರವೂ ಇತರ ರಾಜ್ಯಗಳಂತೆ ಸಹಜ ಸ್ಥಿತಿಗೆ ಮರಳುತ್ತಿದೆ. ಈ ನಿಟ್ಟಿನಲ್ಲಿ ರಾಷ್ಟ್ರಧ್ವಜ ಹಾರಾಟವೂ ಬಹಳ ಮಹತ್ತ್ವದ ವಿಷಯವಾಗಿದೆ.

### ಎಲ್ಲೋ ಕೇಳಿದ ಕಥೆ

90 ವರ್ಷ ವಯಸ್ಸಿನ ಝೆನ್ ಮಾಸ್ಟರ್ ಲಾವೊ ಟ್ಸುನ ಹಳೆಯ ಹಿಂಬಾಲಕನೊಬ್ಬನು ತನ್ನ ಚಿಕ್ಕ ಮಗನೊಂದಿಗೆ ಬಾವಿ ನೀರನ್ನು ಎಳೆಯುತ್ತಿರುತ್ತಾನೆ. ಗುರು ಕನ್ಫ್ಯೂಷಿಯಸ್ ಅಕಸ್ಮಾತ್ತಾಗಿ ಅದೇ ದಾರಿಯಲ್ಲಿ ಹಾದು ಹೋಗುತ್ತಿರುವಾಗ, ಅವರು ಆ ಮುದುಕ ಮತ್ತು ಸಣ್ಣ ಹುಡುಗ ಕೆಲಸ ಮಾಡುವುದನ್ನು ನೋಡಿದರು ಮತ್ತು ಹಳೆಯ ಮನುಷ್ಯನ ಬಳಿಗೆ ಹೋಗಿ ಹೇಳಿದರು, "ಮೂರ್ಖ, ನಿನಗೆ ಗೊತ್ತೇ, ಈಗ ನಾವು ಈ ರೀತಿಯ ಕೆಲಸ ಮಾಡಲು ಕುದುರೆಗಳು ಅಥವಾ ಎತ್ತುಗಳನ್ನು ಬಳಸುತ್ತೇವೆ? ನೀನೇಕೆ ಅನವಶ್ಯಕವಾಗಿ ನಿನ್ನನ್ನು ಮತ್ತು ಈ ಚಿಕ್ಕ ಹುಡುಗನನ್ನು ದಣಿಸುತ್ತಿರುವೆ?" ಆಗ ಆ ಮುದುಕ "ದಯವಿಟ್ಟು, ನನ್ನ ಮಗನ ಮುಂದೆ ಇದನ್ನು ನಾನು ಮಾತನಾಡುವುದಿಲ್ಲ. ನನ್ನ ಹುಡುಗ ಊಟಕ್ಕೆ ಹೋದಾಗ ಸ್ವಲ್ಪ ಸಮಯದ ನಂತರ ನೀವು ಬರಬಹುದು. ಆಗ ಈ ವಿಷಯದ ಬಗ್ಗೆ ಮಾತಾಡೋಣ" ಎಂದು ಹೇಳಿದನು.

ಇದನ್ನು ಕೇಳಿ ಕನ್ಫ್ಯೂಷಿಯಸ್‌ಗೆ ಆಶ್ಚರ್ಯವಾಯಿತು. ಆದರೂ ಕೂಡ ಮಧ್ಯಾಹ್ನ ಊಟದ ಸಮಯ ಆಗುವವರೆಗೂ ಕಾದು ಕುಳಿತರು. ಮಧ್ಯಾಹ್ನವಾಗುತ್ತಿದ್ದಂತೆ ಮಗನು ಊಟಕ್ಕೆ ಹೋದನು. ಇದನ್ನು ಗಮನಿಸಿದ ಕನ್ಫ್ಯೂಷಿಯಸ್ ಕೂಡಲೇ ಮುದುಕನ ಬಳಿ ಬಂದು "ನಾನು ನಿಮಗೆ ಹೇಳಿದ್ದನ್ನು ಯಾಕೆ ನಿನ್ನ ಮಗನು ಕೇಳಬಾರದು? ಅದರಲ್ಲೇನಿದೆ ತಪ್ಪು?" ಎಂದು ಕೇಳಿದನು. "ನಾನು 90 ವರ್ಷ ವಯಸ್ಸಿನವನಾಗಿದ್ದೇನೆ ಮತ್ತು ಇನ್ನೂ ಯುವ ವ್ಯಕ್ತಿಯೊಂದಿಗೆ ಕೆಲಸ ಮಾಡಲು ಶಕ್ತಿಯನ್ನು ಹೊಂದಿದ್ದೇನೆ. ನಾನು ಬಾವಿಯ ನೀರನ್ನು ಎಳೆಯಲು ಕುದುರೆಗಳನ್ನು ಬಳಸಿದರೆ, ನನ್ನ ಮಗನಿಗೆ 90 ವರ್ಷದ ವೇಳೆಗೆ ಅದೇ ಶಕ್ತಿ ಇರುವುದಿಲ್ಲ. ಆದ್ದರಿಂದ ಇದನ್ನು ನನ್ನ ಮಗನ ಮುಂದೆ ಮಾತನಾಡುವುದಿಲ್ಲ. ಇದು ಅವನ ಆರೋಗ್ಯದ ಪ್ರಶ್ನೆಯಾಗಿದೆ. ನಗರಗಳಲ್ಲಿ ಕುದುರೆಗಳು ಬಾವಿ ನೀರನ್ನು ಎಳೆಯುತ್ತವೆ ಎಂದು ನನಗೆ ಗೊತ್ತು. ಈ ಕೆಲಸ ಮಾಡುವ ಯಂತ್ರಗಳು ಕೂಡ ಇವೆ ಎಂದು ನನಗೆ ಗೊತ್ತು. ಆದರೆ ನಂತರ, ನನ್ನ ಮಗ ಏನು ಕೆಲಸ ಮಾಡುತ್ತಾನೆ? ಅವನು ದುಡಿಯದಿದ್ದರೆ ಹೇಗೆ? ಕೆಲಸ ಮಾಡದಿದ್ದರೆ ಅವನ ಆರೋಗ್ಯ, ಅವನ ಜೀವಂತಿಕೆ ಏನಾಗುತ್ತದೆ?" ಎಂದು ಉತ್ತರಿಸಿದನು.

ಕೆಲಸ ಮತ್ತು ವಿಶ್ರಾಂತಿ ಒಂದಕ್ಕೊಂದು ಸಂಬಂಧ ಹೊಂದಿವೆ. ನೀವು ವಿಶ್ರಾಂತಿ ಬಯಸುವುದಾದರೆ, ಕಷ್ಟಪಟ್ಟು ಶ್ರಮಿಸಬೇಕು. ಆಗ ವಿಶ್ರಾಂತಿ ಸಮಯದಲ್ಲಿ ನೆಮ್ಮದಿಯೂ ಸಿಗುತ್ತದೆ. ಅದೇ ಹರೆಯದ ವಯಸ್ಸಿನಲ್ಲಿ ಕಷ್ಟ ಪಡಲಿಲ್ಲವೆಂದರೆ, ಇಳಿವಯಸ್ಸಿನಲ್ಲಿ ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆಯಬೇಕಾಗುತ್ತದೆ.

### ಪುಸ್ತಕ ಪರಿಚಯ




ಪುಸ್ತಕದ ಹೆಸರು: ಜೀವನ ಸೌಂದರ್ಯ ಮತ್ತು ಸಾಹಿತ್ಯ
ಲೇಖಕರು: ಡಿ ವಿ ಗುಂಡಪ್ಪ

ಅನುದಿನದ ಜೀವನದಲ್ಲಿ ಸಾಹಿತ್ಯ ಮತ್ತು ಸೌಂದರ್ಯಗಳ ಸೊಬಗನ್ನು ಮನಮುಟ್ಟುವಂತೆ ವಿವರಿಸುವ ಸುಂದರ ಕೃತಿಯಿದು. ಪುಸ್ತಕದ ಒಂದು ತುಣುಕು ಇಲ್ಲಿದೆ.

ವಿಜ್ಞಾನವು ಬುದ್ಧಿಪ್ರಧಾನವಾದ ವ್ಯಾಪಾರ; ಸಾಹಿತ್ಯವು ಮಾನವ ಜೀವನದಲ್ಲಿ ಸೇರಿರುವ ಬುದ್ಧಿಶಕ್ತಿ ಮನಃಶಕ್ತಿಗಳೇ ಮೊದಲಾದ ಸಮಸ್ತ ಶಕ್ತಿಗಳ ಅನ್ಯೋನ್ಯ ಸಂಘಾತ ಪರಿಣಾಮಗಳ ಪ್ರತಿಬಿಂಬರೂಪವಾದ ವ್ಯಾಪಾರ. ಆದುದರಿಂದ ವಿಜ್ಞಾನ ಮತ್ತು ಸಾಹಿತ್ಯಗಳಿಗೆ ಪರಸ್ಪರ ದ್ವೇಷವಿಲ್ಲ; ಬಾಂಧವ್ಯವೇ ಇದೆ. ಸಾಹಿತ್ಯದ ಮಹಾಸಾಮ್ರಾಜ್ಯದಲ್ಲಿ ವಿಜ್ಞಾನವು ಒಂದು ಪ್ರಾಂತ. ಆದರೆ ಅದು ಅಮೂಲ್ಯವಾದ ಪ್ರಾಂತ. ಮೈಸೂರು ರಾಜ್ಯಕ್ಕೆ ಕೃಷ್ಣರಾಜಸಾಗರದ ಪ್ರಾಂತವೂ ಕೋಲಾರದ ಚಿನ್ನದ ಗಣಿಯ ಪ್ರಾಂತವೂ ಇರುವ ಹಾಗೆ. ಆ ಪ್ರಾಂತದಿಂದ ಬರುವ ಲಾಭವು ಸಾಮ್ರಾಜ್ಯಕ್ಕೆಲ್ಲ ಸೇರಿದ ಒಂದು ದೊಡ್ಡ ಸಂಪತ್ತು. ವಿಜ್ಞಾನದ ಬೀಜವೆನಿಸುವ ಪುರುಷಪ್ರಯತ್ನ ಮತಕ್ಕೆ ಮಹಾಕಾವ್ಯವು ತಂದೆಯಂತಲ್ಲದಿದ್ದರೆ ತಾತನಂತೆ ಇರುವುದು. ಮಹಾಕವಿಯು ದೊಡ್ಡಗಂಟಲಿನ ಮೇಸ್ತ್ರಿಯಲ್ಲ, ಬೆತ್ತ ಹಿಡಿದ ಉಪಾಧ್ಯಾಯನಲ್ಲ; ಅವನು ಮೆಲ್ಲನೆ ಕಿವಿಯಲ್ಲುಸುರುವ ಆಪ್ತ ಸ್ನೇಹಿತ, ಕಣ್ಣು ಸನ್ನೆ ಮಾಡುವ ಒಡನಾಡಿ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಸುನಿಲ್ ಕುಲಕರ್ಣಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ

ಅಮೆರಿಕದ ಲಸಿಕೆ ತಯಾರಿಕಾ ಕಂಪೆನಿ ನೊವಾವಾಕ್ಸ್ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಕೊರೊನಾ ವೈರಸ್ ಲಸಿಕೆ ಕೊವೊವಾಕ್ಸ್‌ನ ಪ್ರಯೋಗ ಭಾರತದಲ್ಲಿ ಪ್ರಾರಂಭವಾಗಿದೆ ಎಂದು ವಿಶ್ವದ ಅತಿದೊಡ್ಡ ಲಸಿಕೆ ತಯಾರಕ ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾದ ಸಿಇಒ ಆದರ್ ಪೂನವಾಲಾ ಹೇಳಿದ್ದಾರೆ. ಸೆಪ್ಟೆಂಬರ್ ವೇಳೆಗೆ ಲಸಿಕೆ ಬಳಕೆಗೆ ಯೋಗ್ಯವಾಗುವ ಸಾಧ್ಯತೆಯಿದೆ. ಈ ಲಸಿಕೆಯನ್ನು ಆಫ್ರಿಕನ್ ಮತ್ತು ಯುಕೆ ರೂಪಾಂತರಿ ವೈರಸ್ಗಳ ವಿರುದ್ಧ ಪರೀಕ್ಷಿಸಲಾಗಿದೆ ಮತ್ತು ಒಟ್ಟಾರೆ 89% ನಷ್ಟು ಪರಿಣಾಮಕಾರಿಯಾಗಿದೆ ಎಂದು ಅವರು ತಿಳಿಸಿದ್ದಾರೆ.

ಏರ್ ಇಂಡಿಯಾದ ಖಾಸಗೀಕರಣವು ಮೇ ಅಂತ್ಯದ ವೇಳೆಗೆ ಪೂರ್ಣಗೊಳ್ಳುವ ಸಾಧ್ಯತೆಯಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಹೇಳಿದ್ದಾರೆ. ಕೆಲವು ಆಸಕ್ತ ಕಂಪೆನಿಗಳು ಈಗಾಗಲೇ ಬಿಡ್ ಸಲ್ಲಿಸಿದ್ದು ಎರಡು ತಿಂಗಳಿನಲ್ಲಿ ಆಯ್ಕೆ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

ದೇಶದ ಪ್ರಾದೇಶಿಕ ಸಂಪರ್ಕದಲ್ಲಿ ಮಹತ್ವದ ಬೆಳವಣಿಗೆ ನಡೆದಿದ್ದು, ಉಡಾನ್ ಯೋಜನೆಯಡಿ ಒಟ್ಟು 18 ವಾಯು ಮಾರ್ಗಗಳನ್ನು ಇತ್ತೀಚೆಗೆ ಕಾರ್ಯಾಗತಗೊಳಿಸಲಾಗಿದೆ. ಇದರೊಂದಿಗೆ, ಉಡಾನ್ – ಪ್ರಾದೇಶಿಕ ಸಂಪರ್ಕ ಯೋಜನೆ (ಆರ್‌ಸಿಎಸ್) ಅಡಿಯಲ್ಲಿ 343 ಕ್ಕೂ ಹೆಚ್ಚು ಮಾರ್ಗಗಳನ್ನು ಪ್ರಾರಂಭವಾದಂತಾಗಿದೆ. ಉಡಾನ್ನಿಂದಾಗಿ ದೇಶದಲ್ಲಿ ವಿಮಾನ ಪ್ರಯಾಣವನ್ನು ಕೈಗೆಟುಕುವ ಮತ್ತು ವ್ಯಾಪಕವಾಗಿ ಮಾಡುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದೆ. ಹೊಸ ಮಾರ್ಗಗಳಲ್ಲಿ ಆಗ್ರಾದಿಂದ ಬೆಂಗಳೂರು ಮತ್ತು ಭೋಪಾಲ್, ಪ್ರಯಾಗರಾಜ್‌ನಿಂದ ಭುವನೇಶ್ವರ ಮತ್ತು ಭೋಪಾಲ್, ಕರ್ನೂಲ್ನಿಂದ ಚೆನ್ನೈ, ಬೆಂಗಳೂರು ಮತ್ತು ವಿಶಾಖಪಟ್ಟಣಂ, ಗೋರಖ್ಪುರದಿಂದ ಲಕ್ನೋ ಮತ್ತು ದಿಮಾಪುರದಿಂದ ದಿಬ್ರುಗಢ ಸೇರಿವೆ.



ಹಿಮಪರ್ವತಗಳನ್ನು ಕತ್ತರಿಸುವುದು ಸೇರಿದಂತೆ ಆಯಕಟ್ಟಿನ ಹೆದ್ದಾರಿಗಳನ್ನು ನಿರ್ವಹಿಸುವ ರಕ್ಷಣಾ ಸಚಿವಾಲಯದ ಒಂದು ವಿಭಾಗವಾದ ಬಾರ್ಡರ್ ರೋಡ್ಸ್ ಆರ್ಗನೈಸೇಶನ್ (ಬಿಆರ್‌ಒ) ಐತಿಹಾಸಿಕ ಸಾಧನೆಯೊಂದನ್ನು ಮಾಡಿದೆ. ಹಿಮಾಚಲ ಪ್ರದೇಶ ಪ್ರವಾಸಿ ತಾಣ ಮನಾಲಿಯನ್ನು ಲಡಾಖ್ನ ಲೇಹ್ನೊಂದಿಗೆ ಎರಡು ತಿಂಗಳು ಮುಂಚಿತವಾಗಿಯೇ ಸಂಪರ್ಕಿಸುವಲ್ಲಿ ಯಶಸ್ವಿಯಾಗಿದೆ. "ಕಳೆದ ನವೆಂಬರ್‌ನಲ್ಲಿ ಹಿಮಪಾತವು ಪ್ರಾರಂಭವಾಗುವುದಕ್ಕಿಂತ ಮುಂಚೆಯೇ, ನಾವು ಸರ್ಚುವಿನ ಬರಾಲಾಚಾ ಪಾಸ್‌ನಾದ್ಯಂತ ಯಂತ್ರೋಪಕರಣಗಳನ್ನು ತಂದು ಇರಿಸಿದ್ದೆವು ಮತ್ತು ಪಡಿತರವನ್ನು ಸಂಗ್ರಹಿಸಿದ್ದೆವು" ಎಂದು ಬಿಆರ್‌ಒ ನ ಮುಖ್ಯ ಎಂಜಿನಿಯರ್ (ಪ್ರಾಜೆಕ್ಟ್ ದೀಪಕ್) ಬ್ರಿಗೇಡಿಯರ್ ಎಂ ಎಸ್ ಬಾಗಿ ಮಾಧ್ಯಮಗಳಿಗೆ ತಿಳಿಸಿದರು. "ಫೆಬ್ರವರಿ ಎರಡನೇ ವಾರದಲ್ಲಿ ಎಂಜಿನಿಯರ್ ಅವರನ್ನು ಒಳಗೊಂಡ ಆರು ಬಿಆರ್‌ಒ ಸಿಬ್ಬಂದಿಗಳ ತಂಡವು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಕೆಲಸ ಮಾಡಿ ಈ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಮುಗಿಸಿದ್ದಾರೆ. ಮನಾಲಿ–ಲೇಹ್ ಹೆದ್ದಾರಿ ರೋಹ್ತಾಂಗ್ ಪಾಸ್ (13,050 ಅಡಿ), ಬಾರಾಲಾಚಾ ಪಾಸ್ (16,020 ಅಡಿ), ಲಾಚ್ಲುಂಗ್ಲಾ ಪಾಸ್ (16,620 ಅಡಿ) ಮತ್ತು ಟ್ಯಾಂಗ್ಲಾಂಗ್ಲಾ (17,480 ಅಡಿ) ಮೂಲಕ ಚಲಿಸುತ್ತದೆ.

ಕಳೆದ ಹಣಕಾಸು ವರ್ಷದಲ್ಲಿ ಇತರ ದೇಶಗಳಿಗಿಂತ ಹೆಚ್ಚಿನ ಹೆದ್ದಾರಿಗಳನ್ನು ನಿರ್ಮಿಸುವ ಮೂಲಕ ಭಾರತ ರಸ್ತೆ ನಿರ್ಮಾಣದಲ್ಲಿ ಒಂದು ಮಹತ್ವದ ಮೈಲಿಗಲ್ಲು ಸಾಧಿಸಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. 2020–21ನೇ ಸಾಲಿನಲ್ಲಿ ಪ್ರತಿದಿನ 37 ಕಿಲೋಮೀಟರ್ ರಸ್ತೆಗಳನ್ನು ನಿರ್ಮಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ನವದೆಹಲಿಯಲ್ಲಿ ಸುದ್ದಿಗಾರರಿಗೆ ಮಾಹಿತಿ ನೀಡಿದ ಸಚಿವರು, ಕಳೆದ ಹಣಕಾಸು ವರ್ಷದಲ್ಲಿ 13,000 ಕಿಲೋಮೀಟರ್ ರಸ್ತೆಗಳನ್ನು ನಿರ್ಮಿಸಲಾಗಿದೆ. ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಎದುರಿಸಿದ ಸವಾಲುಗಳ ನಡುವೆಯೂ ಈ ಸಾಧನೆ ಮಾಡಲಾಗಿದೆ ಎಂದು ಅವರು ಹೇಳಿದರು. ಈ ನಡುವೆ, ಕಳೆದ ಏಳು ವರ್ಷಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಉದ್ದವು ಶೇಕಡಾ 50 ರಷ್ಟು ಏರಿದ್ದು, 91 ಸಾವಿರ ಕಿಲೋಮೀಟರ್ ನಿಂದ 1.37 ಲಕ್ಷ ಕಿಲೋಮೀಟರ್ಗೆ ಏರಿದೆ.



ಖ್ಯಾತ ತಮಿಳು ನಟ ರಜನೀಕಾಂತ್ ಅವರಿಗೆ 2020 ನೇ ಸಾಲಿನ ದಾದಾ ಸಾಹೇಬ್ ಫಾಲ್ಕೆ ಪುರಸ್ಕಾರವನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ತಮಿಳು ಚಿತ್ರರಂಗದ ಸೂಪರ್ ಸ್ಟಾರ್ ಎಂದೇ ಖ್ಯಾತಿ ಪಡೆದಿರುವ ರಜನೀಕಾಂತ್ ಅವರ 50 ವರ್ಷಗಳ ಸಿನಿಮಾ ರಂಗದಲ್ಲಿನ ಸೇವೆಯನ್ನು ಗಣನೆಗೆ ತೆಗೆದುಕೊಂಡಿರುವ ಕೇಂದ್ರ ಸರ್ಕಾರ ಈ ಪುರಸ್ಕಾರವನ್ನು ಪ್ರಕಟಿಸಿದೆ. ಈ ಸಂಬಂಧ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಅವರು ಅಧಿಕೃತ ಘೋಷಣೆಯನ್ನು ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರೂ ರಜನೀಕಾಂತ್ ಅವರಿಗೆ ಟ್ವೀಟ್ ಮೂಲಕ ಅಭಿನಂದನೆಗಳನ್ನು ತಿಳಿಸಿದ್ದಾರೆ.

## ಸಾಲುದ್ದದ ಸುದ್ದಿಗಳು




ಯುರೋಪಿಯನ್ ಯೂನಿಯನ್ ಕೋವಿಡ್ ಲಸಿಕೆ ಡೋಸ್‌ಗಳ ಕೊರತೆಯನ್ನು ಎದುರಿಸುತ್ತಿದೆ. ಇದಕ್ಕಾಗಿ ಪುಣೆ ಮೂಲದ ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾದಿಂದ ತುರ್ತು ಲಸಿಕೆಗಳನ್ನು ಖರೀದಿಸಲು ಅವಕಾಶ ನೀಡುವಂತೆ ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದೆ. ಸೀರಮ್ ಇನ್ಸ್ಟಿಟ್ಯೂಟ್ ಅಸ್ಟ್ರಾಜೆನೆಕಾದ ಕೋವಿಡ್–19 ಲಸಿಕೆಯನ್ನು ಕೋವಿಶೀಲ್ಡ್ ಬ್ರಾಂಡ್ ಹೆಸರಿನಲ್ಲಿ ತಯಾರಿಸುತ್ತಿದೆ. 10 ಮಿಲಿಯನ್ ಡೋಸ್ ಖರೀದಿಸಲು ಅವಕಾಶ ನೀಡುವಂತೆ ಯೂನಿಯನ್ ವಿನಂತಿಸಿದೆ. ಭಾರತ ಈಗಾಗಲೇ ಸುಮಾರು 83 ದೇಶಗಳಿಗೆ 70 ದಶಲಕ್ಷಕ್ಕೂ ಹೆಚ್ಚಿನ ಡೋಸ್ ಅನ್ನು ರಫ್ತು ಮಾಡಿದೆ. ಈಗಾಗಲೇ ಲಸಿಕೆ ಖರೀದಿಸಿರುವ ಬ್ರಿಟನ್ ಕೂಡ, ಇನ್ನೂ 10 ಮಿಲಿಯನ್ ಡೋಸ್ಗಳನ್ನು ಪೂರೈಸುವಂತೆ ವಿನಂತಿಸುತ್ತಿದೆ. ಪುಣೆ ಮೂಲದ ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ವಿಶ್ವದ ಲಸಿಕೆಗಳ ಅತಿದೊಡ್ಡ ಉತ್ಪಾದನಾ ಕೇಂದ್ರವಾಗಿದೆ.

## ಬಾಂಗ್ಲಾ ಹಿಂದುಗಳಿಗೆ ಅಮೇರಿಕಾದ ಮಾಜಿ ಕಾಂಗ್ರೆಸ್ ಸದಸ್ಯೆ ತುಳಸಿ ಗಬ್ಬಾರ್ಡ್ ಬೆಂಬಲ

ಮಹತ್ವದ ಬೆಳವಣಿಗೆಯೊಂದರಲ್ಲಿ, ಅಮೆರಿಕದ ಮಾಜಿ ಕಾಂಗ್ರೆಸ್ ಸದಸ್ಯೆ ತುಳಸಿ ಗಬ್ಬಾರ್ಡ್ ಅವರು ಬಾಂಗ್ಲಾದೇಶದ ಮತೀಯ ಹಿಂಸಾಚಾರಕ್ಕೊಳಗಾದ ಹಿಂದೂ ಅಲ್ಪಸಂಖ್ಯಾತರ ಪರವಾಗಿ ಮಾತನಾಡಿದ್ದಾರೆ. ಮತೀಯ ಕಿರುಕುಳ ಘಟನೆಗಳ ಮೂಲದಲ್ಲಿರುವ ಇಸ್ಲಾಮಿಕ್ ಮೂಲಭೂತವಾದಿಗಳನ್ನು ಸೋಲಿಸಲು ವಿಶ್ವ ನಾಯಕರು ಒಗ್ಗೂಡಬೇಕೆಂದು ಅವರು ಮನವಿ ಮಾಡಿದ್ದಾರೆ. "ಕಾಂಗ್ರೆಸ್ ಸದಸ್ಯಳಾಗಿ, ಬಾಂಗ್ಲಾದೇಶದಲ್ಲಿ ಹಿಂದೂಗಳು ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ರಕ್ಷಣೆಗಾಗಿ ನಾನು ನಿರ್ಣಯವನ್ನು ಮಂಡಿಸಿದ್ದೆ. ಅಲ್ಲಿ ಇಂದಿಗೂ ಅಲ್ಪಸಂಖ್ಯಾತ ಜನರು ಕಿರುಕುಳಕ್ಕೊಳಗಾಗುತ್ತಿದ್ದಾರೆ. ಈ ಕಿರುಕುಳ 50 ವರ್ಷಗಳ ಹಿಂದೆಯೇ ಪ್ರಾರಂಭವಾಯಿತು. ಲಕ್ಷಾಂತರ ಬಂಗಾಳಿ ಹಿಂದೂಗಳನ್ನು ಅವರ ಧರ್ಮದ ಕಾರಣದಿಂದಾಗಿ ಪಾಕಿಸ್ತಾನದ ಸೈನ್ಯವು ವ್ಯವಸ್ಥಿತವಾಗಿ ಕೊಲೆ, ಅತ್ಯಾಚಾರ ಮಾಡಿತು ಹಾಗೂ ಅವರನ್ನು ಮನೆಗಳಿಂದ ಓಡಿಸಿತು." ಎಂದು ಅವರು ಹೇಳಿದ್ದಾರೆ.



ಕಿರುಕುಳವು ಬಾಂಗ್ಲಾದೇಶದಲ್ಲಿ ಹಿಂದೂ ಅಲ್ಪಸಂಖ್ಯಾತರ ಸಂಖ್ಯೆಯನ್ನು ಹೇಗೆ ಕಡಿಮೆ ಮಾಡಿದೆ ಎಂಬುದರ ಕುರಿತು ಮಾತನಾಡಿದ ಅವರು, 1900 ರ ದಶಕದ ಆರಂಭದಲ್ಲಿ ದೇಶದಲ್ಲಿ ಹಿಂದೂಗಳ ಸಂಖ್ಯೆ ಸುಮಾರು 33 ಪ್ರತಿಶತದಷ್ಟಿತ್ತು ಆದರೆ ಇಂದು ಅದು ಕೇವಲ 8 ಪ್ರತಿಶತದಷ್ಟಿದೆ ಎಂದಿದ್ದಾರೆ. ಇಸ್ಲಾಮಿಕ್ ಜಿಹಾದಿಗಳು ಎಲ್ಲೆಡೆ ಅಲ್ಪಸಂಖ್ಯಾತರನ್ನು ವ್ಯವಸ್ಥಿತವಾಗಿ ಹಿಂಸಿಸುತ್ತಿದ್ದಾರೆಂದು ಅವರು ವಿವರಿಸಿದರು. ಅಫ್ಘಾನಿಸ್ತಾನದಲ್ಲಿ ಅಲ್ಪಸಂಖ್ಯಾತರ ಗಮನಾರ್ಹ ಜನಸಂಖ್ಯೆ ಇತ್ತು. ಆದರೆ ಇಸ್ಲಾಮಿಕ್ ಮೂಲಭೂತವಾದಿಗಳು ಅವರ ಮೇಲೆ ಕೊಲೆ, ಅತ್ಯಾಚಾರ ಮತ್ತು ಚಿತ್ರಹಿಂಸೆ ಮಾಡಿ ಅವರನ್ನು ನಾಶ ಮಾಡಿದರು ಎಂದಿದ್ದಾರೆ.

ಪ್ರಪಂಚದಾದ್ಯಂತದ ಇಸ್ಲಾಮಿಕ್ ಮುಲಭೂತವಾದಿಗಳನ್ನು ಸೋಲಿಸಲು ವಿಶ್ವ ನಾಯಕರು ಒಗ್ಗೂಡಬೇಕೆಂದು ಅವರು ಮನವಿ ಮಾಡಿದ್ದಾರೆ. ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಬಾಂಗ್ಲಾದೇಶಕ್ಕೆ ಭೇಟಿ ನೀಡಿದ್ದರು. ಅವರ ಭೇಟಿಯನ್ನು ವಿರೋಧಿಸಿ ಮೂಲಭೂತವಾದಿಗಳು ಅನೇಕ ದೇವಾಲಯಗಳು, ರಸ್ತೆಗಳು, ಬಸ್ಸುಗಳು ಇತ್ಯಾದಿಗಳ ಮೇಲೆ ದಾಳಿ ಮಾಡಿದರು. ಈ ಘಟನೆಗಳನ್ನು ಗಬ್ಬಾರ್ಡ್ ತನ್ನ ವೀಡಿಯೊ ಸಂದೇಶದಲ್ಲಿ ಉಲ್ಲೇಖಿಸಿದ್ದಾರೆ.




ಭಾರತೀಯ ರೈಲ್ವೆ 2020–21ರ ಅವಧಿಯ ಒಂದೇ ವರ್ಷದಲ್ಲಿ ಆರು ಸಾವಿರ ಕಿಲೋಮೀಟರ್ ವ್ಯಾಪ್ತಿಯನ್ನು ಹೊಂದಿರುವ ರೈಲು ಮಾರ್ಗಗಳ ವಿದ್ಯುದೀಕರಣವನ್ನು ಮಾಡಿದೆ. ಇದು 2018–19ರಲ್ಲಿ ಸಾಧಿಸಿದ ಐದು ಸಾವಿರ ಕಿಲೋಮೀಟರ್ಗಳ ದಾಖಲೆಯನ್ನು ಮೀರಿದೆ. ಆಮದು ಮಾಡಿಕೊಳ್ಳಲಾಗುವ ಪೆಟ್ರೋಲಿಯಂ ಆಧಾರಿತ ಇಂಧನದ ಮೇಲೆ ದೇಶದ ಅವಲಂಬನೆಯನ್ನು ಕಡಿಮೆ ಮಾಡಲು ಭಾರತೀಯ ರೈಲ್ವೆ ಇತ್ತೀಚಿನ ವರ್ಷಗಳಲ್ಲಿ ವಿದ್ಯುದೀಕರಣಕ್ಕೆ ಹೆಚ್ಚಿನ ಒತ್ತು ನೀಡಿದೆ. 2007–14ಕ್ಕೆ ಹೋಲಿಸಿದರೆ ಕಳೆದ ಏಳು ವರ್ಷಗಳಲ್ಲಿ ಐದು ಪಟ್ಟು ಹೆಚ್ಚು ವಿದ್ಯುದೀಕರಣವನ್ನು ಸಾಧಿಸಲಾಗಿದೆ. ರೈಲ್ವೆ ಸಚಿವಾಲಯವು ಡಿಸೆಂಬರ್ 2023 ರೊಳಗೆ ತನ್ನ ಹಳಿಗಳನ್ನು ಸಂಪೂರ್ಣವಾಗಿ ವಿದ್ಯುದೀಕರಿಸಲು ಯೋಜಿಸಿದೆ. ಹಾಗೆಯೇ, 2030 ರ ವೇಳೆಗೆ ರೈಲ್ವೇ ಪರ್ಯಾಯ ಇಂಧನ ಮೂಲಗಳಿಂದ ತನಗೆ ಬೇಕಾಗುವ ಸಂಪೂರ್ಣ ವಿದ್ಯುತ್ ಉತ್ಪಾದಿಸಲಿದೆ.

## ತೇಗ ಮತ್ತು ಬೇವಿನ ಮರದಿಂದ ನೀರಿನ ಶುದ್ಧೀಕರಣ

ಐಐಟಿ–ಬಿಎಚ್‌ಯು (ಬನಾರಸ್ ಹಿಂದು ವಿಶ್ವವಿದ್ಯಾಲಯ) ವಿಜ್ಞಾನಿಗಳು ತೇಗ ಮತ್ತು ಬೇವಿನ ಮರದಿಂದ ತಯಾರಿಸಿದ ಬೂದಿಯನ್ನು ಬಳಸಿ ನೀರಿನಿಂದ ವಿಷಕಾರಿ ವಸ್ತುಗಳನ್ನು ಹೊರತೆಗೆಯುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದ್ದಾರೆ. ಈ ವಿಧಾನವು ಪರಿಸರ ಸ್ನೇಹಿ ಮಾತ್ರವಲ್ಲದೆ, ಅಗ್ಗವಾಗಿದೆ. ನೀರಿನಲ್ಲಿ ಲಭ್ಯವಿರುವ ಖನಿಜಗಳನ್ನು ಉಳಿಸಿಕೊಂಡು ಆರ್ಗನ್ನಳ ವೆಚ್ಚವನ್ನು ಕಡಿಮೆ ಮಾಡುವುದರ ಜೊತೆಗೆ ಗಂಗಾ ನೀರನ್ನು ಶುದ್ಧೀಕರಿಸಲು ಸಹ ಇದನ್ನು ಅಳವಡಿಸಿಕೊಳ್ಳಬಹುದು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ಬಯೋಕೆಮಿಕಲ್ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ವಿಶಾಲ್ ಮಿಶ್ರಾ ಮತ್ತು ಅವರ ತಂಡವು ತೇಗದ ಮರದ ಪುಡಿ ಮತ್ತು ಬೇವಿನ ಕಾಂಡದ ಭಸ್ಮದಿಂದ ಎರಡು ವಿಭಿನ್ನ ರೀತಿಯ ಆಬ್ಸಾರ್ಬೆಂಟ್ ಅನ್ನು ಸಿದ್ಧಪಡಿಸಿದೆ. ಇದರಿಂದ ಹಾನಿಕಾರಕ ಲೋಹಗಳ ಮತ್ತು ಅಯಾನುಗಳನ್ನು ನೀರಿನಿಂದ ಬೇರ್ಪಡಿಸಬಹುದು. ಇತರ ರಾಸಾಯನಿಕ ತಂತ್ರಗಳಿಗಿಂತ ಅಗ್ಗದ ಮತ್ತು ಹೆಚ್ಚು ಪರಿಣಾಮಕಾರಿ ಎಂದು ಪರಿಗಣಿಸಬಹುದಾಗಿದೆ ಎಂದು ವಿಶಾಲ್ ಮಿಶ್ರಾ ಅವರು ಹೇಳಿದ್ದಾರೆ. ನೀರಿನಿಂದ ಹರಡುವ ರೋಗಗಳ ತಡೆಗಟ್ಟುವಲ್ಲಿ ಇದು ಬಹಳ ಪರಿಣಾಮಕಾರಿ ಎಂದು ಅವರು ತಿಳಿಸಿದ್ದಾರೆ.

Date of Publication 10 APRIL 2021

REGISTERED NEWS PAPER RNI 36528/79 LICENSE TO POST
WITHOUT PREPAYMENT LICENSE NO PMG/BG/WPP-46/2021-2023 AT BENGALURU PSO
BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 15-04-2021

पुंगव PUNGAVA

# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00



## ಪಶ್ಚಿಮ ಬಂಗಾಳ ಚುನಾವಣೆ: ಬಿಜೆಪಿ ಕಾರ್ಯಕರ್ತನ ತಾಯಿಯ ಹತ್ಯೆ



ತೃಣಮೂಲ ಕಾಂಗ್ರೆಸ್ ಗೂಂಡಾಗಳಿಂದ ಕ್ರೂರವಾಗಿ ಹಲ್ಲೆಗೊಳಗಾಗಿದ್ದ ಬಿಜೆಪಿ ನಾಯಕ ಗೋಪಾಲ್ ಮಜುಂದಾರ್ ಅವರ 85 ವರ್ಷದ ತಾಯಿ ಶೋವಾ ಮಜುಂದಾರ್ ನಿಧನರಾಗಿದ್ದಾರೆ. ಇವರು ಮಾರ್ಚ್ 25 ರಂದು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದು, ನಾಲ್ಕು ದಿನಗಳ ನಂತರ ನಿಧನರಾಗಿದ್ದಾರೆ.

ಫೆಬ್ರವರಿ 27 ರ ಬೆಳಿಗ್ಗೆ ಟಿಎಂಸಿ ಕಾರ್ಯಕರ್ತರ ಗುಂಪೊಂದು ಅವರ ಮನೆಗೆ ನುಗ್ಗಿ ಅವರನ್ನು ನೆಲಕ್ಕೆ ತಳ್ಳಿ ಮುಖಕ್ಕೆ ಹೊಡೆದಿತ್ತು. ದಾಳಿಕೋರರು ಘಟನೆಯ ಬಗ್ಗೆ ಬಾಯಿ ಬಿಡದಂತೆ ಬೆದರಿಕೆ ಹಾಕಿದ್ದರು ಮತ್ತು ಪೊಲೀಸರಿಗೆ ತಿಳಿಸದಂತೆ ಎಚ್ಚರಿಕೆ ನೀಡಿದ್ದರು ಎನ್ನಲಾಗಿದೆ. ಗೋಪಾಲ್ ಮತ್ತು ಅವರ ತಾಯಿ ನೀಡಿದ ದೂರುಗಳ ಆಧಾರದ ಮೇಲೆ ಗೂಂಡಾಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಗೋಪಾಲ್ ಅವರು ಬಿಜೆಪಿಯಲ್ಲಿ ಸಕ್ರಿಯ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದದ್ದೇ ಅವರ ತಾಯಿಯ ಮೇಲಿನ ಹಲ್ಲೆಗೆ ಕಾರಣ. ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆ ಚುನಾವಣೆ ನಡೆಯುತ್ತಿದ್ದು, ತೃಣಮೂಲ ಕಾಂಗ್ರೆಸ್ ಗೂಂಡಾಗಳಿಂದ ವ್ಯಾಪಕ ಹಿಂಸಾಚಾರ ನಡೆಯುತ್ತಿದೆ.

## ಈ ವಿತ್ತ ವರ್ಷದಲ್ಲಿ ಭಾರತದ ಜಿಡಿಪಿ 7.5%–12.5%ರಷ್ಟು ಬೆಳವಣಿಗೆಯಾಗಲಿದೆ: ವಿಶ್ವಬ್ಯಾಂಕ್

2021–22 ಹಣಕಾಸು ವರ್ಷದ ಭಾರತೀಯ ಜಿಡಿಪಿ ಬೆಳವಣಿಗೆಯ ಅಂದಾಜನ್ನು ಕಳೆದ ಜನವರಿಯಲ್ಲಿ ಊಹಿಸಿದ್ದ 5.4 % ಕ್ಕಿಂತ ಹೆಚ್ಚಿಸಿ ವಿಶ್ವಬ್ಯಾಂಕ್ ಈಗ 10.1% ಕ್ಕೆ ಏರಿಸಿದೆ. ಆರ್ಥಿಕತೆಯ ಮೇಲೆ ಕೋವಿಡ್ –19 ಪರಿಣಾಮಗಳ ಕಾರಣ ಅನಿಶ್ಚಿತತೆಯಿದ್ದ ಹಿನ್ನೆಲೆಯಲ್ಲಿ, ಭಾರತದ ಜಿಡಿಪಿ ಬೆಳವಣಿಗೆಯು ಶೇಕಡಾ 7.5 ರಿಂದ 12.5 ರವರೆಗಿನ ವ್ಯಾಪ್ತಿಯಲ್ಲಿರಬಹುದು ಎಂದು ವಿಶ್ವ ಬ್ಯಾಂಕ್ ಹೇಳಿದೆ. ಖಾಸಗಿ ಖರೀದಿ ಮತ್ತು ಹೂಡಿಕೆಯ ಬೆಳವಣಿಗೆಯಲ್ಲಿ ಉತ್ತಮ ಬದಲಾವಣೆಗಳಾಗುತ್ತಿರುವ ಹಿನ್ನೆಲೆಯಲ್ಲಿ ಮುನ್ಸೂಚನೆಯನ್ನು ಪರಿಷ್ಕರಿಸಲಾಗಿದೆ ಎಂದು ಹೇಳಿದೆ.

## ಯುಎಇಯ ಮೊದಲ ಹಿಂದೂ ದೇಗುಲದ ಅಡಿಪಾಯ ಕಾರ್ಯ ಮುಂದಿನ ತಿಂಗಳು ಪೂರ್ಣ



ಯುಎಇಯ ಮೊದಲ ಸಾಂಪ್ರದಾಯಿಕ ಹಿಂದೂ ದೇವಾಲಯದ ಅಡಿಪಾಯದ ಕೆಲಸ ಮುಂದಿನ ತಿಂಗಳು ಅಬುಧಾಬಿಯಲ್ಲಿ ಪೂರ್ಣಗೊಳ್ಳಲಿದೆ. ಈ ದೇವಾಲಯದಲ್ಲಿ ಹಿಂದೂ ದೇವ–ದೇವಿಯರಿಗೆ ಮೀಸಲಾಗಿರುವ ಹಲವಾರು ಗುಡಿಗಳು ಇರಲಿವೆ. ಸಂಕೀರ್ಣದಲ್ಲಿ ಸಂದರ್ಶಕರ ಕೇಂದ್ರ, ಪ್ರಾರ್ಥನಾ ಮಂದಿರಗಳು, ಗ್ರಂಥಾಲಯ, ತರಗತಿ ಕೊಠಡಿ, ಸಮುದಾಯ ಕೇಂದ್ರ, ಆಂಫಿ ಥಿಯೇಟರ್, ಆಟದ ಮೈದಾನ, ಉದ್ಯಾನಗಳು, ಪುಸ್ತಕಗಳು ಮತ್ತು ಉಡುಗೊರೆ ಅಂಗಡಿಗಳು, ಹೋಟೆಲ್ ಮತ್ತು ಇತರ ಸೌಲಭ್ಯಗಳು ಇರಲಿವೆ.

ಅಡಿಪಾಯದ ಕೆಲಸವು ಅಂತಿಮ ಹಂತದಲ್ಲಿದ್ದು, ನೆಲಮಟ್ಟದಿಂದ 4.5 ಮೀಟರ್ ಎತ್ತರಕ್ಕೆ ಏರುತ್ತಿದೆ. ಗುಲಾಬಿ ಮರಳುಗಲ್ಲುಗಳು ಮತ್ತು ಮಾರ್ಬಲ್ಗಳ ಸ್ಥಾಪನೆಯು ಮೇ ತಿಂಗಳಿನಿಂದ ಪ್ರಾರಂಭವಾಗಲಿದೆ ಎಂದು ಖಲೀಜ್ ಟೈಮ್ಸ್ ವರದಿ ಮಾಡಿದೆ.

ಕಲ್ಲನ್ನು ಸಿದ್ಧಪಡಿಸುವ ಕಾರ್ಯದ ಬಹುಪಾಲು ಭಾಗವನ್ನು ಭಾರತದ ರಾಜ್ಯಗಳಾದ ರಾಜಸ್ಥಾನ ಮತ್ತು ಗುಜರಾತ್ನಲ್ಲಿ 2,000 ಕ್ಕೂ ಹೆಚ್ಚು ಶಿಲ್ಪಿಗಳು ಮಾಡಿದ್ದಾರೆ. ಸಿದ್ಧಗೊಂಡ ಕಲ್ಲುಗಳನ್ನು ಅಬುಧಾಬಿಗೆ ಕಳುಹಿಸಲಿದ್ದೇವೆ, ನಂತರ ಅದನ್ನು ಅಡಿಪಾಯದ ಮೇಲೆ ಇಡಲಾಗುತ್ತದೆ ಎಂದು ರಾಜಸ್ಥಾನದ ಶಿಲ್ಪಿಗಳು ಹೇಳಿದ್ದಾರೆ. ಅಬುಧಾಬಿಯ ಈ ಮೊತ್ತಮೊದಲ ಹಿಂದೂ ದೇವಾಲಯದ ಕಲ್ಲುಗಳು ಹಿಂದೂ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತದ ಚಿತ್ರಣಗಳು, ಭಾರತದ ಗ್ರಂಥಗಳು, ಪ್ರಾಚೀನ ಕಥೆಗಳು ಮತ್ತು ಕೊಲ್ಲಿ ರಾಷ್ಟ್ರಗಳ ಜನಪ್ರಿಯ ಶೈಲಿಗಳಿಂದ ಅಲಂಕರಿಸಲ್ಪಡಲಿದೆ.

## ಬಲವಂತದ ಮತಾಂತರದ ವಿರುದ್ಧ ಮಸೂದೆ ಅಂಗೀಕರಿಸಿದ ಗುಜರಾತ್ ಅಸೆಂಬ್ಲಿ

ಗುಜರಾತ್ ವಿಧಾನಸಭೆ ಗುರುವಾರ ಬಲವಂತದ ಮತಾಂತರವನ್ನು ತಡೆಗಟ್ಟುವ ಸಲುವಾಗಿ ಮಹತ್ವದ ಮಸೂದೆಯನ್ನು ಅಂಗೀಕರಿಸಿದೆ. 'ಧಾರ್ಮಿಕ ಸ್ವಾತಂತ್ರ್ಯ' ಕಾಯ್ದೆ 2003 ಅನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಅಂಗೀಕರಿಸಲಾಗಿದೆ. ಪ್ರೀತಿಯ ಹೆಸರಿನಲ್ಲಿ, ಮದುವೆಯ ಹೆಸರಿನಲ್ಲಿ ಬಲವಂತವಾಗಿ ಮಾಡಲಾಗುವ ಮತಾಂತರಗಳನ್ನು ತಡೆಗಟ್ಟುವ ಮಹತ್ವದ ಉದ್ದೇಶವನ್ನು ಈ ಮಸೂದೆ ಒಳಗೊಂಡಿದೆ. ಆಡಳಿತಾರೂಢ ಬಿಜೆಪಿಯಿಂದ ಮಂಡಿಸಲ್ಪಟ್ಟ ಈ ತಿದ್ದುಪಡಿಯು ಉತ್ತಮ ಜೀವನಶೈಲಿ, ದೇವರ ಆಶೀರ್ವಾದ ಮತ್ತು ವಿವಾಹದ ನೆಪದಲ್ಲಿ ಆಮಿಷಕ್ಕೆ ಒಳಪಡಿಸಿ ಮಾಡುವ ಮತಾಂತರವನ್ನು ನಿಷೇಧಿಸಲಿದೆ ಮತ್ತು ತಪ್ಪಿತಸ್ಥರನ್ನು ಶಿಕ್ಷಿಸಲು ಈ ಕಾನೂನಿನಲ್ಲಿ ಅವಕಾಶವಿದೆ.

ಮಸೂದೆಯ ನಿಬಂಧನೆಗಳ ಪ್ರಕಾರ, ತಪ್ಪಿತಸ್ಥರು ಮೂರು ವರ್ಷಕ್ಕಿಂತ ಕಡಿಮೆಯಲ್ಲದ ಮತ್ತು ಐದು ವರ್ಷಗಳವರೆಗಿನ ಜೈಲು ಶಿಕ್ಷೆಗೆ ಗುರಿಯಾಗುತ್ತಾರೆ. 2 ಲಕ್ಷ ರೂ.ಗಳ ದಂಡವನ್ನು ಸಹ ಪಾವತಿಸಬೇಕಾಗುತ್ತದೆ.

## ಇತಿಹಾಸ ಪಠ್ಯ ಬದಲಿಸಿದ ಯುಜಿಸಿ: ಭಾರತೀಯ ಅಂಶಗಳ ಸೇರ್ಪಡೆ

ಪಠ್ಯಗಳಲ್ಲಿ ಭಾರತದಲ್ಲಿನ ಮೊಘಲ್ ಆಳ್ವಿಕೆಯ ನಿರೂಪಣೆ ಮತ್ತು ಪ್ರಭಾವವನ್ನು ಕಡಿಮೆ ಮಾಡುವ ಪದವಿ ವಿದ್ಯಾರ್ಥಿಗಳ ಕರಡು ಇತಿಹಾಸ ಪಠ್ಯಕ್ರಮವನ್ನು ಯೂನಿವರ್ಸಿಟಿ ಗ್ರಾಂಟ್ ಕಮಿಷನ್ ಆಫ್ ಇಂಡಿಯಾ (ಯುಜಿಸಿ) ಕ್ರೋಡೀಕರಿಸುತ್ತಿದೆ. ಹಿಂದೆಲ್ಲಾ ಸಾಮಾನ್ಯ ಮಾರ್ಗಸೂಚಿಗಳನ್ನು ನೀಡುವುದಕ್ಕೆ ಹೋಲಿಸಿದರೆ, ಭಾರತದ ಉನ್ನತ ಶಿಕ್ಷಣ ನಿಯಂತ್ರಣ ಸಂಸ್ಥೆಯಾದ ಯುಜಿಸಿ ಸಂಪೂರ್ಣ ಪಠ್ಯಕ್ರಮವನ್ನು ರಚಿಸಿದ್ದು ಇದೇ ಮೊದಲು. "ಮಧ್ಯಯುಗದ ಅವಧಿಯ ಇತಿಹಾಸದ ಗಂಭೀರ ಪುನರ್ರಚನೆಯನ್ನು ಮಾಡಲಾಗಿದೆ, ಅದು ರಾಷ್ಟ್ರದ ಇತಿಹಾಸದ ಬಗ್ಗೆ ಸರಿಯಾದ ತಿಳುವಳಿಕೆಯನ್ನು ನೀಡಲಿದೆ" ಎಂದು ಆಯೋಗವು ಪ್ರಸ್ತಾವಿತ ಕರಡಿನ ಮುನ್ನುಡಿಯಲ್ಲಿ ಉಲ್ಲೇಖಿಸಿದೆ. ಅಲ್ಲದೇ, ಹೊಸ ಪಠ್ಯಕ್ರಮದಲ್ಲಿ ಹಿಂದು ಧರ್ಮ ಮತ್ತು ಸಂಸ್ಕೃತಿಯ ಬಗ್ಗೆಯೂ ಹೆಚ್ಚಿನ ಗಮನ ಇರಲಿದೆ ಎಂದು ಮೂಲಗಳು ತಿಳಿಸಿವೆ.

## ಬೆಂಗಳೂರಿನಲ್ಲಿನ ದೇಶದ ಮೊದಲ ಎಸಿ ರೈಲ್ವೇ ಟರ್ಮಿನಲ್



ಭಾರತದ ಮೊದಲ ಹವಾನಿಯಂತ್ರಿತ (ಎಸಿ) ರೈಲ್ವೇ ಟರ್ಮಿನಲ್ ಬೆಂಗಳೂರಿನಲ್ಲಿ ಸಿದ್ಧವಾಗಿದೆ. ಭಾರತ ರತ್ನ ಸರ್ ಎಂ ವಿಶ್ವೇಶ್ವರಯ್ಯ ಅವರ ಹೆಸರಿನ ಈ ಹವಾನಿಯಂತ್ರಿತ ರೈಲ್ವೆ ನಿಲ್ದಾಣಕ್ಕೆ ಉತ್ತಮ ದರ್ಜೆಯ ಪ್ರಯಾಣಿಕರ ಸೌಲಭ್ಯಗಳು, ಸಾಕಷ್ಟು ಪಾರ್ಕಿಂಗ್ ಸ್ಥಳ ಮತ್ತಿತರ ಮೂಲಸೌಕರ್ಯಗಳನ್ನು ಒದಗಿಸಲಾಗಿದೆ.

ವಿಶ್ವ ದರ್ಜೆಯ ರೈಲ್ವೆ ನಿಲ್ದಾಣಗಳನ್ನು ನಿರ್ಮಿಸುವ ಭಾರತೀಯ ರೈಲ್ವೆಯ ಯೋಜನೆಯ ಅಂಗವಾಗಿ. ನವದೆಹಲಿ, ಗುವಾಹಟಿ, ಪಾಟ್ನಾ, ಗ್ವಾಲಿಯರ್, ಸೂರತ್, ತಿರುಪತಿ, ಚಂಡೀಗಢ, ಆನಂದ್ ವಿಹಾರ್, ನಾಗ್ಪುರ ಮತ್ತು ಮುಂಬೈನ ಸಿಎಸ್ಟಿ ಸೇರಿದಂತೆ 50 ಪ್ರಮುಖ ನಿಲ್ದಾಣಗಳ ಅಭಿವೃದ್ಧಿಯನ್ನು ರೈಲ್ವೆ ಇಲಾಖೆ ನಿರ್ವಹಿಸುತ್ತಿದೆ.

ಅಲ್ಲದೇ, ಬಿಹಾರದ ಆರು, ಜಾರ್ಖಂಡ್ನಲ್ಲಿ ಮೂರು ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಒಂದು ರೈಲು ನಿಲ್ದಾಣಗಳ ಪುನರಭಿವೃದ್ಧಿಗಾಗಿ ರೈಲ್ವೆ ತಾಂತ್ರಿಕ–ಆರ್ಥಿಕ ಕಾರ್ಯಸಾಧ್ಯತಾ ಅಧ್ಯಯನಗಳನ್ನು ಕೈಗೊಳ್ಳಲಿದೆ ಎಂದು ಕೇಂದ್ರದ ಎನ್ಡಿಎ ಸರ್ಕಾರ ತಿಳಿಸಿದೆ.

## ಘರ್ ವಾಪಸಿ: ಜಾರ್ಖಂಡ್‌ನಲ್ಲಿ ಹಿಂದು ಧರ್ಮಕ್ಕೆ ಮರಳಿದ 181 ಮತಾಂತರಿತ ಕ್ರೈಸ್ತರು



ಜಾರ್ಖಂಡಿನ ಗರ್ಹ್ವಾ ಜಿಲ್ಲೆಯಲ್ಲಿ ನಡೆದ ಘರ್ ವಾಪಸಿ ಕಾರ್ಯಕ್ರಮವೊಂದರಲ್ಲಿ 33 ಕುಟುಂಬಗಳ 181 ಕ್ರೈಸ್ತರು ಮರಳಿ ಸರ್ನಾ ಸಮುದಾಯಕ್ಕೆ ಮತಾಂತರಗೊಂಡರು. ಈ ಕುಟುಂಬಗಳು ಹಿಂದಿನ ತಪ್ಪನ್ನು ಸರಿಪಡಿಸಲು ನಿರ್ಧರಿಸಿ ಪುನಃ ಮಾತೃಧರ್ಮಕ್ಕೆ ಮರಳಿವೆ. ಸರ್ನಾ ಎಂಬುದು ವನವಾಸಿ ಸಮುದಾಯವಾಗಿದ್ದು ಅವರು ಪ್ರಕೃತಿಯನ್ನು ವಿವಿಧ ರೂಪಗಳಲ್ಲಿ ಇವರು ಪೂಜಿಸುತ್ತಾರೆ.

ತಮ್ಮ ಪೂರ್ವಜರನ್ನು ಮಿಷನರಿಗಳು ಮತಾಂತರಗೊಳಿಸಿದ್ದರು. ಸಮಯ ಕಳೆದಂತೆ, ಅದು ತಪ್ಪು ಎಂದು ತಾವು ಅರಿತುಕೊಂಡು ಈಗ ಮರಳಿ ಬಂದಿದ್ದಾಗಿ ಅವರು ತಿಳಿಸಿದ್ದಾರೆ. ದೇಶದಲ್ಲಿ ಅಂದಾಜು 40 ಲಕ್ಷ ಸರ್ನಾಗಳಿದ್ದಾರೆ. ಜಾರ್ಖಂಡ್ನಲ್ಲಿ ಸುಮಾರು 35 ಲಕ್ಷ ಜನರು ವಾಸಿಸುತ್ತಿದ್ದಾರೆ. ಉಳಿದವರು ಒಡಿಶಾ, ಬಿಹಾರ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ ಮತ್ತು ಛತ್ತೀಸ್ಗಢದಲ್ಲಿ ಹರಡಿಕೊಂಡಿದ್ದಾರೆ. ಕ್ರಿಶ್ಚಿಯನ್ ಮಿಷನರಿಗಳು ಅವರನ್ನು ಕ್ರಿಶ್ಚಿಯನ್ ರಿಲಿಜನ್ಗೆ ಪರಿವರ್ತಿಸಲು ಎಲ್ಲ ಪ್ರಯತ್ನಗಳನ್ನು ಮಾಡುತ್ತಲೇ ಬಂದಿದ್ದಾರೆ.

## ಮೈಸೂರಿನ ಡಿಎಫ್‌ಆರ್‌ಎಲ್ ಸಂಸ್ಥೆಯಿಂದ ಬಾಹ್ಯಾಕಾಶದಲ್ಲಿ ಆಹಾರ ಕೆಡದಿರುವಂತೆ ಹೊಸ ಪ್ಯಾಕಿಂಗ್ ಆವಿಷ್ಕಾರ

ಸಂಪೂರ್ಣ ಭಾರತ ಇಸ್ರೋದ ಮಾನವ ಸಹಿತ ಗಗನಯಾನ ಯೋಜನೆಯತ್ತ ದೃಷ್ಟಿ ನೆಟ್ಟಿದೆ. 2022 ರ ವೇಳೆಗೆ ಈ ಯೋಜನೆ ಸಫಲವಾಗುವ ನಿರೀಕ್ಷೆಗಳೂ ಇವೆ. ಈ ಗಗನಯಾನದಲ್ಲಿ ಭಾರತೀಯ ಗಗನಯಾನಿಗಳು ಅಲೂ ಪರಾಠ ಮತ್ತು ಇಡ್ಲಿಯನ್ನು ತಮ್ಮೊಂದಿಗೆ ಒಯ್ಯಲಿದ್ದಾರೆ. ಈ ಆಹಾರ ದೀರ್ಘ ಸಮಯದವರೆಗೆ ಕೆಡದಂತೆ ಕಾಪಾಡುವ ಮತ್ತು ಬಾಹ್ಯಾಕಾಶ ಯಾನದ ಸಂದರ್ಭದಲ್ಲಿ ತ್ಯಾಜ್ಯ ನಿರ್ವಹಣೆಗೆ ಅನುಕೂಲವಾಗುವಂತೆ ವಿಶೇಷ ಪ್ಯಾಕಿಂಗ್ ಅನ್ನು ಮೈಸೂರಿನ ಡಿಎಫ್ಆರ್ಎಲ್ ಸಂಸ್ಥೆ ಸಿದ್ಧಪಡಿಸಿದೆ. ಭಾರತದ ಆತ್ಮನಿರ್ಭರ ಕನಸಿನಡಿಯಲ್ಲಿ ಈ ಪ್ಯಾಕಿಂಗ್ ಸಂಶೋಧನೆ ಸಾಕಾರವಾಗಿದೆ.

ಈ ವಿಶೇಷ ಆಹಾರ ಪ್ಯಾಕಿಂಗ್‌ಗಾಗಿ ಸಂಸ್ಥೆ ಪೇಟೆಂಟ್ ಸಹ ಪಡೆದಿದೆ. ಇದು ಆಹಾರವನ್ನು ಹಾಳು ಮಾಡುವ ಅಥವಾ ಬಳಕೆಗೆ ಯೋಗ್ಯವಲ್ಲದಂತೆ ಮಾಡುವ ಕೀಟಾಣುಗಳನ್ನು ನಿರ್ಬಂಧಿಸಲಿದೆ. ಜೊತೆಗೆ ಆಹಾರ ಪದಾರ್ಥಗಳು ಕೆಟ್ಟ ವಾಸನೆ ಹೊರಸೂಸುವುದಕ್ಕೂ ತಡೆಯೊಡ್ಡಲಿದೆ. ಈಗಾಗಲೇ ಬಾಹ್ಯಾಕಾಶ ಯಾನಿಗಳು ಸ್ಯಾಂಡ್ವಿಚ್, ಬರ್ಗರ್‌ಗಳನ್ನು ತಮ್ಮ ಯಾನದ ಸಂದರ್ಭದಲ್ಲಿ ಜೊತೆಗೆ ಒಯ್ಯುತ್ತಾರೆ. ಆದರೆ ಭಾರತೀಯ ಆಹಾರಗಳಲ್ಲಿ ತೇವಾಂಶ ಹೆಚ್ಚಾಗಿರುವ ಕಾರಣ ಈವರೆಗೆ ಇವುಗಳನ್ನು ಬಾಹ್ಯಾಕಾಶ ಯಾನದ ಸಂದರ್ಭದಲ್ಲಿ ಒಯ್ಯುವ ಪ್ರಯತ್ನಗಳಾಗಿರಲಿಲ್ಲ. ಇದೀಗ ಮೈಸೂರಿನ ಡಿಎಫ್ಆರ್ಎಲ್ ಈ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಕಂಡುಹುಡುಕಿದೆ.

ಓದುಗರೇ ಗಮನಿಸಿ

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.